Shortly after 3 P.M., in the Question - answer session, number of questions were asked. The summary of the plethora of questions were:

Why there is always disparity in the world ?

Some are beautiful, happy, prosperous and others always suffer pain, hardships throughout ? If God created everything why this duality? why is he keeping quiet when unlawful evil actions are on the rise ? Why decent, pious, virtuous people always suffer more in the life ?

The summary of answers given are as under -

CC-O. In Public Domain. Digitized by eGangotri

God, the supreme obsolute cannot be understood by the senses, is attributeless, formless, Nirguna, Nirvishesha parabrahman. He is not responsible for all the dualities of life (samsara) like happiness - sorrow; pleasure - pain; Good-bad; troubles and sufferings. Only we are solely responsible for the fruits of our past actions in previous births as per Karma Siddhantha. Once we separate the I or 'self' from the mind and body, then we remain balanced and peaceful as a witness to these events and actions.

By constant sincere prayers and total surrender to God, The 'Antha Karana' (Inner consciousness) gets purified gradully and we will be at peace with our inner self (Atman).

Antha Karana includes Manas, (mind) Chitta, Ahamkara (Ego) and Buddhi (intellect). Mind is the most fickle, shaky dimension with constant raising and falling of thoughts like waves. It percieves all types of sensations and suffers pain and pleasure. It is Subtle and highly uncontrollable.

Chitta acts like our memory bank to store every stimulus perceived in the brain helps in recalling the memory. Ahamkara, the individual self" most potent entity responsible for all actions and thoughts and behaviour controlling master of our mind and body. Buddhi is the subtle reasoning power which differentiates good from evil. The first step in the spiritual quest is the purification of our 'Anthakarana' which is possible by constant prayer, total surrender, Guru's benediction and devine grace.

In the end, again a brief meditation session was conducted in which everybody was found peacefully meditating.

The Satsanga graced by the swamiji on that day was the most memorable, sacred experience for all of us. Many wanted to have similar satsanga camps more often.

CC-0. Mumukshu Bhawan Varanasi Collection. Digitized by eGangotri

ಒಂದು ವರದಿ :

1999 ಜುಲೈ 28, ಆಷಾಢ ಶುದ್ಧ ಪೂರ್ಣಿಮೆಯ ಪವಿತ್ರ ದಿನದಂದು ಆಣುಸೋಣೆಯ ಹಂಸಾಶ್ರಮದಲ್ಲಿ ಪೂಜ್ಯ ಸ್ವಾಮಿ ವಿರಾಜೇಶ್ವರರ ದಿವ್ಯ ಸನ್ನಿಧಿಯಲ್ಲಿ ವ್ಯಾಸ ಪೂರ್ಣಿಮೆಯ ಹೃದಯಂಗಮ ಕಾರ್ಯಕ್ರಮ ಮನೋಜ್ಞವಾಗಿ ನೆರೆದಿದ್ದ ಭಕ್ತ ಸಮೂಹದ ಮಧ್ಯೆ ನಡೆಯಿತು.

ಬೆಳಗ್ಗೆ 10.30ಕ್ಕೆ ಸರಿಯಾಗಿ, ಶ್ರೀ ರಾಘವ ಬ್ರಹ್ಮಚಾರಿಗಳು ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಋಗ್ವೇದ, ಯಜುರ್ವೇದಗಳ ಸೂಕ್ತ ಪಠಣ ಮತ್ತು ವಿಷ್ಣು ಸಹಸ್ರನಾಮದ ಅಖಂಡ ಪಾರಾಯಣದೊಂದಿಗೆ ಸಕಲ ಪೂಜಾವಿಧಿಗಳನ್ನು ನೆರವೇರಿಸಿದರು. ನೆರೆದಿದ್ದ ಭಕ್ತರೂ ಸಹ ಪವಿತ್ರ ಬಿಲ್ವ, ತುಳಸಿ ಪತ್ರಗಳು ಹಾಗು ಪುಷ್ಪಗಳ ಸಹಾಯದಿಂದ ಸಾಮೂಹಿಕವಾಗಿ ಅರ್ಚನೆಯಲ್ಲಿ ಪಾಲುಗೊಂಡರು. ಪ್ರೊ. ರಾಮಮೂರ್ತಿಯವರ ಸುತ, 16 ವರ್ಷದ ಬಾಲಕ ಶ್ರೀ ಚೈತನ್ಯ ಕುಮಾರ ತನ್ನ ಸುಮಧುರ ವೇಣುವಾದನದಿಂದ ಎಲ್ಲರನ್ನೂ ತಣಿಸಿ, ದೇವತಾ ಕೈಂಕರ್ಯಕ್ಕೆ ತಮ್ಮ ಅಳಿಲು ಸೇವೆ ಸಲ್ಲಿಸಿದರು. ನಂತರ ಶ್ರೀ ಕೃಷ್ಣ ಭಕ್ತೆ ಹರಿದಾಸಿಯವರು ತಮ್ಮ ವೃಂದದವರಿಂದ ಸಾಮೂಹಿಕ ಭಜನೆಯನ್ನು ಪ್ರಾರಂಭಿಸಿ ನೆರೆದಿದ್ದ ಭಕ್ತರೆಲ್ಲರೂ ಭಜನಾಮೃತದ ಸವಿಗಡಲಲ್ಲಿ ತೇಲಾಡುವಂತೆ ಉದ್ದೀಪಿಸಿದರು.

ನಂತರ ತಮ್ಮ ಆಶೀರ್ವಚನದಲ್ಲಿ ಸ್ವಾಮೀಜಿಯವರು ವ್ಯಾಸ ಪೂಜೆಯ ಮಹತ್ವವನ್ನು ತಿಳಿಸಿದರು. ವೇದವಾಙ್ಮಯವನ್ನು ಚತುರ್ವೇದಗಳಾಗಿ ವಿಭಾಗಿಸಿ, ಅಷ್ಟಾದಶ ಪುರಾಣಗಳನ್ನೂ, ಮಹಾಭಾರತವನ್ನೂ, ಶ್ರೀಮದ್ ಭಾಗವತವನ್ನೂ ರಚಿಸಿದವರು, ವಿಷ್ಣುಸ್ವರೂಪಿ ಭಗವಾನ್ ವೇದವ್ಯಾಸ ಮಹರ್ಷಿಗಳು. ಸನಾತನ ಗುರು ಪರಂಪರೆಯಲ್ಲಿ ಶ್ರೇಷ್ಠ ಗುರು ಹಾಗು ಮನುಕುಲಕ್ಕೇ ಮಹಾಗುರು ಶ್ರೀ ವೇದವ್ಯಾಸರು. ಜನ್ಮನೀಡಿ, ನಮ್ಮನ್ನು ಪೋಷಿಸಿ, ಮಾರ್ಗದರ್ಶಕರಾದ ತಂದೆ, ತಾಯಿಯರು ಸದಾ ವಂದ್ಯರು. ಆದರೆ ಈ ಸಂಸಾರವೆಂಬ ಸಾಗರದ ಸುಳಿಯಲ್ಲಿ ಜನನ – ಮರಣದ ನಿರಂತರ ಚಕ್ರದಲ್ಲಿ ಸಿಲುಕಿ ಅಸಹಾಯಕರಾದಾಗ ಈ ಭವ ಬಂಧನದ ಬಿಡುಗಡೆಗೆ ಸರಿಯಾದ ಮಾರ್ಗ ತೋರಿಸುವವನು ಗುರು. ತನ್ನ ಉಪದೇಶದಿಂದ ಅಜ್ಞಾನವನ್ನು ತೊಲಗಿಸಿ ಜ್ಞಾನಮಾರ್ಗದಲ್ಲಿ, ಸಾಧನೆಯ ಪಥದಲ್ಲಿ ಮುನ್ನಡೆಸಿ, ದಾರಿ ತೋರಿಸುವವನು ಗುರು. ಅಂತಹ ಸದ್ಗುರುವು ಪೂಜಾರ್ಹನು. ಅಂತಹ ಗುರು ಪರಂಪರೆಗೆ ಭಕ್ತಿಯಿಂದ ನಮಿಸುವ,

Sri Vidyabharathi Book Centre, Sringeri

ಅವರ ಅನುಗ್ರಹಕ್ಕೆ ಪಾತ್ರರಾಗುವಂತಹ ಉದ್ದೇಶವೇ ಈ ವ್ಯಾಸಪೂರ್ಣಿಮೆಯ ಗುರು ವಂದನಾಚರಣೆ. ಈ ಋಣವನ್ನು ಯಾವ ರೀತಿಯಿಂದಲೂ ತೀರಿಸಲಸಾಧ್ಯ.

CC-O. In Public Domain. Digitized by eGangotri

ತಮ್ಮ ಆಶೀರ್ವಚನದ ಕೊನೆಯಲ್ಲಿ ಸ್ವಾಮೀಜಿಯವರು ಸಾಮೂಹಿಕ ಧ್ಯಾನದ ಬಗೆಯನ್ನು ವಿವರಿಸಿ, ಎಲ್ಲರೂ ಅದರಲ್ಲಿ ಪಾಲುಗೊಳ್ಳುವಂತೆ ಮಾಡಿದರು.

ನಂತರ ಪ್ರೊ. ನಾಗರಾಜ ಪದಕಿ, ಸ್ವಾಮೀಜಿಯವರು ಯಾವ ರೀತಿ ಒಬ್ಬ ಶ್ರೇಷ್ಠ ವಿಜ್ಞಾನಿಯಾಗಿ ಅಮೇರಿಕಾದಲ್ಲಿದ್ದರೂ, ಎಲ್ಲವನ್ನೂ ತ್ಯಜಿಸಿ, ಭಾರತಕ್ಕೆ ಮರಳಿ, ಹಿಮಾಲಯದಲ್ಲಿ ಶ್ರೀ ವಿದ್ಯಾನಂದ ಸ್ವಾಮೀಜಿಯವರ ಶಿಷ್ಯತ್ವ ಪಡೆದು, ರಾಜಯೋಗದಲ್ಲಿ ಸಾಧನೆ ನಡೆಸಿ, ತಮ್ಮ ತಪೋಬಲದ ಸಾಂಗತ್ಯದಿಂದ ಭಗವಂತನ ಸಾಕ್ಷಾತ್ಕಾರ ಪಡೆದ ಬಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು ಹಾಗು ಶ್ರೀಮದ್ ಶಂಕರ ಭಗವತ್ಪಾದರಿಂದ ನಿಖಿರವಾಗಿ ಪ್ರತಿಪಾದಿಸಲ್ಪಟ್ಟ ಅದ್ವೈತ ಸಿದ್ಧಾಂತದ ಬಗ್ಗೆ ಸಾಮಾನ್ಯವಾಗಿ ವಿವರಿಸಿದರು. ಹಂಸಾಶ್ರಮದ ಬೆಳವಣಿಗೆ, ಪ್ರಾರ್ಥನಾ ಸಭೆ ನಿರ್ಮಾಣ, ನೀರಿನ ವ್ಯವಸ್ಥೆಗಳ ವಿಚಾರದಲ್ಲಿ, ಎಲ್ಲ ಭಕ್ತಾಧಿಗಳು ಮುಕ್ತ ಹಸ್ತದಿಂದ ಸಹಾಯ ಮಾಡಬೇಕೆಂದು ಪ್ರಾರ್ಥಿಸಿದರು; ಹಾಗು ದಿವ್ಯ ಚೇತನರೂಪಿ, ಬ್ರಹ್ಮಜ್ಞಾನಿ ಸ್ವಾಮೀಜಿಯವರ ಅಭಯಹಸ್ತ ಮತ್ತು ಆಶೀರ್ವಾದ ಎಲ್ಲರಿಗೂ ಲಭಿಸಲಿ ಎಂದು ಪ್ರಾರ್ಥಿಸಿದರು.

1.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆದು 3 ಘಂಟೆಯಿಂದ, 5 ಘಂಟೆಯವರೆಗೆ ಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ಪ್ರಶ್ನೋತ್ತರ ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿ ಬಂದಿತು. ಅದರ ಸಾರಾಂಶ ಇಲ್ಲಿದೆ.

ಆಸಕ್ತ ಬಂಧು ಭಗಿನಿಯರ ವಿವಿಧ ಪ್ರಶ್ನೆಗಳು : ಜಗತ್ತಿನಲ್ಲಿ ಒಂದೆಡೆ ಸುಖ ಸಮೃದ್ಧಿ, ಮತ್ತೊಂದೆಡೆ ಘನಘೋರ ಕಷ್ಟಗಳ ಸರಮಾಲೆ, ದಾರಿದ್ರ್ಯ, ಹಿಂಸೆ. ಕೆಲವರು ಸುಖ ಸಮೃದ್ಧರು, ಕೆಲವರು ನಿರಂತರ ದುಃಖ ತಪ್ತರು. ಭಗವಂತ ಇವೆಲ್ಲವನ್ನು ನೋಡುತ್ತ ಏಕೆ ಸುಮ್ಮನಿದ್ದಾನೆ ? ಆತನು ಕರುಣಾಸಾಗರನೂ, ದಯಾಳುವೂ ಆಗಿದ್ದರೆ, ಯಾಕೆ ಈ ರೀತಿ ನೋವು ಸಂಕಟಗಳನ್ನು ಕೊಡುತ್ತಾನೆ ? ಭಕ್ತಿಯಿಂದ ಪ್ರಾರ್ಥಿಸಿದರೂ ಸಹ ಏಕೆ ಸುಮ್ಮನಿದ್ದಾನೆ ? ಜಗತ್ತನ್ನು ಸೃಷ್ಟಿಸಿದ ಭಗವಂತ, ನಾನಾ ವಿಧ ಗುಣಗಳಿಂದ ಕೂಡಿದ ಜನಗಳನ್ನು ಯಾಕೆ ಹುಟ್ಟಿಸಿದ್ದಾನೆ ? ಒಳ್ಳೆಯವರಿಗೆ, ಸಜ್ಜನರಿಗೆ, ಯಾಕೆ ತೊಂದರೆಯ ಮೇಲೆ ತೊಂದರೆ ಬರುತ್ತವೆ ? ಇದೇನು ಆತನ ಲೀಲೆ ? ಸುಳ್ಳು, ವಂಚನೆ, ಕಪಟ, ಮೋಸಗಳಿಂದ ಕೂಡಿದ ಜನಗಳೇ ಯಾಕೆ ಅತಿ ಹೆಚ್ಚು ಶ್ರೀಮಂತರಾಗುತ್ತಿದ್ದಾರೆ ? ಇತ್ಯಾದಿ ಪ್ರಶ್ನೆಗಳು ಮೂಡಿ ಬಂದವು.

CC-0. In Public Domain. Digitized by eGangotri

ವ್ಯಾವಹಾರಿಕವಾಗಿ, ನಾವು ಈ ದೇಹದ ಪಂಚೇಂದ್ರಿಯಗಳ ನೆರವಿನಿಂದ ನೋಡುವ, ಕೇಳುವ, ಅನುಭವಿಸುವ, ಭೋಗಿಸುವ ಈ ಜಗತ್ತು ಸತ್ಯವಾಗಿ ತೋರಿಬರುತ್ತದೆ. ಆದರೆ ಪಾರಮಾರ್ಥದ ದೃಷ್ಟಿಯಿಂದ ಆಲೋಚಿಸಿದರೆ, ಇದಾವುದೂ ನಿಜವಲ್ಲ, ಮಿಥ್ಯಾ ಸ್ವರೂಪದ್ದು, ನಿರಂತರವಾಗಿ, ಬಂದುಹೋಗುವ, ಹುಟ್ಟಿ ನಶಿಸುವ ಘಟನೆಗಳು ಅಂತ ತಿಳಿಯುತ್ತದೆ. ಇಹ ಜೀವನದಲ್ಲಿ ಹುಟ್ಟಿನಿಂದ ಸಾಯುವವರೆಗೆ ಬರುವ ಸುಖ ದುಃಖಿಗಳಿಗೂ, ನೋವು ನಲಿವುಗಳಿಗೂ ರಾಗ-ದ್ವೇಷಗಳಿಗೂ, ಆಸೆ ನಿರಾಸೆಗಳಿಗೂ ಕಷ್ಟ ಕಾರ್ಪಣ್ಯಗಳಿಗೂ ಪರಮಾತ್ಮ ಹೊಣೆಯಲ್ಲ. ಎಲ್ಲದಕ್ಕೂ ನಮ್ಮ ಜನ್ಮ ಜನ್ಮಾಂತರಗಳ ಕರ್ಮಗಳು ಕಾರಣ. ನಮ್ಮ ನಮ್ಮ ಪ್ರಾರಬ್ಧ ಕರ್ಮಫಲಗಳನ್ನು ನಾವು ಅನುಭವಿಸಿಯೇ ತೀರಬೇಕು. ನಿಜ ಅರ್ಥದಲ್ಲಿ ಜೀವನದಲ್ಲಿ ಎರಗುವ ಕಷ್ಟಗಳು, ತೊಂದರೆಗಳು, ಚಿಂತೆಗಳು – ನಮ್ಮ ದೇಹಕ್ಕೆ, ಮನಸ್ಸಿಗೆ, ಚಿತ್ತಕ್ಕೆ ಹಾಗು ಬುದ್ಧಿಗೆ. ಇವೆಲ್ಲವುಗಳಿಂದ ಹೊರತಾಗಿ ಕೇವಲ ಸಾಕ್ಷೀಭೂತರಾಗಿ – ನಾವು ಸಮತ್ವ ಭಾವನೆಗಳನ್ನು ಬೆಳೆಸಿಕೊಳ್ಳಬೇಕು. ನಿರಂತರ ಪರಮಾತ್ಮನ ಸ್ಮರಣೆಯಿಂದ, ಚಿತ್ತ ಶುದ್ಧಿಯಾದಾಗ, ಸಮತ್ವ ಭಾವನೆ ಉದಯಿಸಿ, ಪರಮಾತ್ಮನ ಅನುಗ್ರಹದಿಂದ ಜೀವನ ಶಾಂತಮಯವಾಗುತ್ತದೆ.

ಅವಿರತ ಸಾಧನೆಯಿಂದ ಅಂತಃಕರಣ ಚತುಷ್ಟಯ ಶುದ್ಧಿ ಉಂಟಾಗುತ್ತದೆ. ಅಂತಃಕರಣವೆಂದರೆ ಸಾಮಾನ್ಯ ಅರ್ಥದಲ್ಲಿ ಮನಸ್ಸು (ಅಂತಃಪ್ರಜ್ಞೆ) ಅಂತ ಭಾವಿಸಿದರೂ ನಿಜ ಅರ್ಥದಲ್ಲಿ 4 ವಿಭಾಗಗಳಿವೆ; ಮನಸ್ಸು, ಚಿತ್ತ, ಅಹಂಕಾರ ಮತ್ತು ಬುದ್ಧಿ.

ಮನಸ್ಸು : ಅತ್ಯಂತ ಚಂಚಲ ಸ್ವಭಾವದ, ಅಸ್ಥಿರವಾದ ಇಂದ್ರಿಯ ಜನ್ಯ ವಿಚಾರಗಳನ್ನು ಬುದ್ಧಿಗೆ ರವಾನಿಸುವ ಪ್ರಜ್ಞೆ. ದೇಹದಲ್ಲಿ ಸರ್ವವ್ಯಾಪಿ. ಗೊತ್ತಿಲ್ಲದೆಯೇ, ಸದಾಕಾಲ, ಅಲೆ ಅಲೆಯಾಗಿ – ಏಳುತ್ತಿರುವ ಆಲೋಚನೆಗಳ ಸಮೂಹ ಮಾಧ್ಯಮ. ಮನಸ್ಸಿಗೆ, ವಿಚಾರಶಕ್ತಿ, ವಿವೇಚನಾಶಕ್ತಿ ಅತ್ಯಂತ ಅಲ್ಪ.

ಚಿತ್ತ : ಸ್ಮರಣೆಯುಂಟುಮಾಡುವಂತಹ, ಹಿಂದಿನ ಘಟನೆಗಳನ್ನು, ವಿಚಾರಗಳನ್ನು ಕೂಡಿಡುವಂತಹ ಮಾಧ್ಯಮ. ಇಂತಹದನ್ನು ನೋಡಿದ್ದೆ, ಕೇಳಿದ್ದೆ, ಮಾಡಿದ್ದೆ, ಓದಿದ್ದೆ, ಇವೆಲ್ಲವು ಚಿತ್ತದ ಸ್ಫುರಣೆಯಿಂದ ಮೂಡಿಬರುವಂತಹದ್ದು. ಮನಸ್ಸಿಗಿಂತ ಸ್ವಲ್ಪ ಮೇಲ್ಮಟ್ಟದ್ದಾದರೂ – ಚಿತ್ತವೂ ಸಹ ಚಂಚಲ.

ಅಹಂಕಾರ : ಅತ್ಯಂತ ದೃಢವಾದ, ಬಲವಾಗಿ ಆಕ್ರಮಿಸಿದ, ನಾನು, ನನ್ನದು ಎನ್ನುವ ಅಹಂಭಾವ. ಈ ಭಾವಪ್ರಜ್ಞೆ ನಮ್ಮನ್ನು ಅನವರತ ಸಂಪೂರ್ಣ ಹಿಡಿತದಲ್ಲಿಟ್ಟುಕೊಂಡು ಆಳುತ್ತಿರುತ್ತದೆ. ನಿಜವಾದ ಅಸ್ತಿತ್ವ ಇಲ್ಲದ್ದು. ಆದರೆ ಪೂರ್ಣ ಶಕ್ತಿಶಾಲಿ.

Sri Vidyabharathi Book Centre, Sringeri

CC-0. In Public Domain. Digitized by eGangotri

ಬುದ್ಧಿ : ವಿಚಾರಾತ್ಮಕ ವಿವೇಚನಾ ಶಕ್ತಿ. ಪ್ರತಿಯೊಂದು ಸಮಯದಲ್ಲಿಯೂ ಯಾವುದು ಒಳ್ಳೆಯದು, ಕೆಟ್ಟದ್ದು, ಯಾವುದು ಸರಿ, ಯಾವುದು ತಪ್ಪು ಅನ್ನುವ ಪರಿಕಲ್ಪನೆ ಮೂಡಿಸುವಂತಹ ಶಕ್ತಿ. ಆತ್ಮನ ನೆರಳು. ಪರಮಾತ್ಮನಿಗೆ ಅತ್ಯಂತ ಸಮೀಪವಾದ ಅಂತಃಕರಣ.

ಸಾಧನಾ ಪಥದ ಪ್ರಥಮ ಸೋಪಾನ – ಅಂತಃಕರಣ ಚತುಷ್ಟಯದ ಶುದ್ಧಿ. ಇದು, ನಿರಂತರ ಪರಮಾತ್ಮನ ಸ್ಮರಣೆ, ಭಜನೆ, ಧ್ಯಾನ, ಸತ್ಸಂಗ, ಗುರುವಿನ ಅನುಗ್ರಹದಿಂದ, ಭಗವಂತನ ಕೃಪೆಯಿಂದ ಸಾಧ್ಯ. ಆಗ ನಮ್ಮೆಲ್ಲ ದುಗುಡ, ದುಮ್ಮಾನ, ಕಷ್ಟನಷ್ಟಗಳ ಪರಿಹಾರ ಸಾಧ್ಯ.

ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ನಡೆದ ಅಂದಿನ ಸತ್ಸಂಗ, ನಮ್ಮೆಲ್ಲರ ಪಾಲಿನ ಮರೆಯಲಾಗದ ಅನುಭವ. ಇಂತಹ ಸತ್ಸಂಗ ಆಗಾಗ್ಗೆ ನಡೆಯಬೇಕೆಂದು ಭಕ್ತರು, ತುಂಬು ಹೃದಯದಿಂದ ಪ್ರಾರ್ಥನೆ ಸಲ್ಲಿಸಿದರು.

***

(ಇಚ್ಛೆಯುಳ್ಳ ಆಸ್ತಿಕ ಬಂಧುಗಳು, ಸ್ವಾಮೀಜಿಯವರ ಹಂಸಾಶ್ರಮ ವಿಳಾಸಕ್ಕೆ ನೇರವಾಗಿ ಪತ್ರ ವ್ಯವಹಾರ ನಡೆಸಬಹುದು. ಅಣುಸೋಣೆಯು ಬೆಂಗಳೂರಿನಿಂದ 60-70 ಕಿಲೋಮೀಟರ್ ದೂರದಲ್ಲಿದೆ. ಎಲ್ಲರಿಗೂ ಅಲ್ಲಿ ಮುಕ್ತ ಸ್ವಾಗತ. ತಮ್ಮ ಆಶಂಕೆ, ಸಂದೇಹ, ಪ್ರಶ್ನೆಗಳಿಗೆ ಸ್ವಾಮೀಜಿಯವರು ಉತ್ತರ ನೀಡುತ್ತಾರೆ.

ದಯಾಮಯನೂ, ಪ್ರೇಮಮಯನೂ ಆದ ಹೇ ಪರಮೇಶ್ವರನೇ ನಿನಗೆ ಅನಂತ ಪ್ರಣಾಮಗಳು. ನಾವು ಸದಾ ನಿನ್ನನ್ನು ಸ್ಮರಿಸುವಂತಾಗಲಿ. ಸರ್ವದಾ ನಿನ್ನ ಪಾವನ ನಾಮವು ನಮ್ಮ ತುಟಿಗಳ ಮೇಲಿರಲಿ. ನಾವು ನಿರಂತರವೂ ನಿನ್ನಲ್ಲಿಯೇ ನೆಟ್ಟ ಮನಸ್ಸುಳ್ಳವರಾಗಿರುವಂತಾಗಲಿ.

- ಶ್ರೀ ಸ್ವಾಮಿ ಶಿವಾನಂದ ಸರಸ್ವತಿ

Sri Vidyabharathi Book Centre, Sringeri

CC-0. In Public Domain. Digitized by eGangotri

ಪುನರ್ಜನ್ಮ ಮತ್ತು ಪಾಪ-ಪುಣ್ಯ

– ಸ್ವಾಮಿ ವಿರಾಜೇಶ್ವರ

ಆಧುನಿಕ ಮನುಕುಲ ದೊಡ್ಡ ದುರಂತವೆಂದರೆ, ತನ್ನ ದೇಹವೇ ಆತ್ಮ ಎನ್ನುವ ತಿಳುವಳಿಕೆ. ತನ್ನ ಪಂಚ ಜ್ಞಾನೇಂದ್ರಿಯಗಳ ಹಾಗು ಪಂಚ ಕರ್ಮೆಂದ್ರಿಯಗಳ ಮೂಲಕ ಶಿಷ್ಟ ಹಾಗು ದುಷ್ಟ ಪ್ರವೃತ್ತಿಗಳಿಂದ ದೇಹ ಸುಖಕ್ಕಾಗಿ ಏನೆಲ್ಲ ಮಾಡುತ್ತಾನೆ. ಮೃತನಾದನಂತರ ದೇಹವನ್ನು ರಕ್ಷಿಸಲು ಅಸಾಧಾರಣ ರೀತಿಯಲ್ಲಿ ತೊಡಗುತ್ತಾನೆ. ಪುರಾತನ ಈಜಿಪ್ಟಿನ ಫ್ಯಾರೋ ರಾಜ ಸಂಸ್ಕೃತಿಯ ಇತಿಹಾಸದ ಪುಟಗಳನ್ನು ನೋಡಿದರೆ, ರಾಜರಾಣಿಯರ, ಪ್ರತಿಷ್ಠಿತರ ಶವಗಳನ್ನು ಕೆಡದಂತೆ ರಕ್ಷಿಸಲು ಆ ಜನರು ಯಾವ ರೀತಿ ಸುವ್ಯವಸ್ಥಿತವಾಗಿ, ಅಪಾರ ಐಶ್ವರ್ಯ, ತಂತ್ರಜ್ಞಾನದ ಸಹಾಯದಿಂದ ಬೃಹದಾಕಾರದ ಪಿರಮಿಡ್ಡುಗಳು ಮತ್ತು ಭೂಗರ್ಭದಲ್ಲಿ ರಹಸ್ಯ ಶವಕೋಣೆಗಳನ್ನು ಕಟ್ಟಿಸಿದ್ದರು ಅನ್ನುವ ವಿಷಯ ತಿಳಿಯುತ್ತದೆ. ಕೊಳೆಯದಂತೆ ಸಾವಿರಾರು ವರ್ಷ ರಕ್ಷಿಸಲ್ಪಟ್ಟ ಶವಗಳು (''ಮಮ್ಮಿಗಳು'') ಪುನಶ್ಚೇತನಗೊಳ್ಳುತ್ತವೆ, ಕಾಲಬಂದಾಗ ಎನ್ನುವ ನಂಬಿಕೆ ಇತ್ತು.

ಪಂಚಭೌತಿಕವಾದ ಈ ಶರೀರ ಕೇವಲ ಆತ್ಮನ ನಿವಾಸ ಎಂದು ನಮ್ಮ ಶಾಸ್ತ್ರಗಳು ಘಂಟಾಘೋಷವಾಗಿ ತಿಳಿಸುತ್ತವೆ. ''ನವದ್ವಾರೇ ಪುರೇದೇಹಿ''. ಆತ್ಮನು ಒಂಬತ್ತು ದ್ವಾರಗಳಿಂದ ಕೂಡಿದ ಭೌತಿಕ ದೇಹದಲ್ಲಿ (ಪುರ) ವಾಸಿಸುತ್ತಾನೆ. ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ಮೂಗಿನ ಹೊಳ್ಳೆಗಳು, ಒಂದು ಬಾಯಿ ಹಾಗು ಮಲಮೂತ್ರಗಳನ್ನು ವಿಸರ್ಜಿಸುವ ಗುದದ್ವಾರ ಹಾಗು ಮೂತ್ರದ್ವಾರ. ಇಲ್ಲಿ ದೇಹವನ್ನು ಕ್ರಮಬದ್ಧವಾಗಿ ಕಟ್ಟಲ್ಪಟ್ಟ ಪುರಕ್ಕೆ ಹೋಲಿಸಲಾಗಿದೆ. ಆತ್ಮನು ಹೃದಯಾಕಾಶದಲ್ಲಿ ಇರುವ ತನಕ ದೇಹ ವ್ಯವಸ್ಥಿತವಾಗಿ ತನ್ನ ಕಾರ್ಯಗಳನ್ನು ಮಾಡುತ್ತದೆ.

ಅವ್ಯಕ್ತ ಪಾಪ ಪುಣ್ಯಗಳ ಹೊರೆ ಹೊತ್ತ ಆತ್ಮ ತಾಯಿಯ ಗರ್ಭದಲ್ಲಿ ಜನನಕ್ಕೆ ಮುನ್ನ ಭ್ರೂಣದಲ್ಲಿ ಪ್ರವೇಶಿಸುತ್ತದೆ ಅನ್ನುವುದು ಜ್ಞಾನಿಗಳಿಗೆ ವೇದ್ಯವಾದ ಸಂಗತಿ. (ಯತಯಃ ಪಶ್ಯಂತ ಕ್ಷೀಣದೋಷಃ) ತನ್ನ ಕರ್ಮಫಲಗಳಿಗನುಸಾರವಾಗಿ ಜೀವನು ಪಾಪಿಯೂ, ಪುಣ್ಯಶಾಲಿಯೂ ಆಗುತ್ತಾನೆ ಎಂಬುದು ಶ್ರುತಿವಚನ.

ಪುಣ್ಯಃ ಪುಣ್ಯೇನ ಕರ್ಮಣಾ ಪಾಪಃ ಪಾಪೇನ... (ಬೃಹ. ಉಪನಿಷತ್) ಕಳ್ಳತನ, ಕೊಲ್ಲುವುದು, ಹಿಂಸೆ, ಸುಳ್ಳು, ವಂಚನೆ, ಕಪಟ ಇತ್ಯಾದಿ ದುಷ್ಕರ್ಮಗಳಿಂದ ಪ್ರಭಾವಿತನಾಗದೆ, ದಯೆ, ಕರುಣೆ, ಅಹಿಂಸೆ, ಸತ್ಯ ಪರಿಪಾಲನೆ, ಅಹಂಕಾರ ನಿವೃತ್ತಿ ಇತ್ಯಾದಿ ಸತ್ಕರ್ಮಗಳಿಂದ ಜೀವನು ಪವಿತ್ರಾತ್ಮನಾಗಿ ಉದ್ಧರಿಸಲ್ಪಡುತ್ತಾನೆ.

CC-O. In Public Domain. Digitized by eGangotri
ಉದ್ಧರೇದಾತ್ಮನಾತ್ಮಾನಂ ನಾತ್ಮಾವಸಾದಯೇತ್ ... (ಭಗವದ್ಗೀತಾ)
ಆತ್ಮನಿಗೆ ಆತ್ಮನೇ ಮಿತ್ರ, ಆತ್ಮನೇ ಶತ್ರು. ನಮ್ಮ ಪುನರ್ಜನ್ಮಕ್ಕೆ ನಮ್ಮ ಪೂರ್ವಜನ್ಮದ ಮಿಶ್ರಕರ್ಮಫಲಗಳೇ ಕಾರಣ.

ಪುಣ್ಯೇನ ಪುಣ್ಯಂ ಲೋಕಂ ನಯತಿ, ಪಾಪೇನ ಪಾಪಮುಭಾಭ್ಯಾಂ ಮನುಷ್ಯ ಲೋಕಮ್... (ಪ್ರಶ್ನ. ಉಪನಿಷತ್)

ಹಿಂದಿನ ಜನ್ಮಗಳಲ್ಲಿ ಕೇವಲ ಸತ್ಕರ್ಮಗಳನ್ನೇ ಮಾಡಿದ್ದರೆ, ಸ್ವರ್ಗಾದಿ, ದೇವಲೋಕಗಳಲ್ಲಿ ಭೋಗಭಾಗ್ಯಗಳನ್ನು ಅನುಭವಿಸುವೆವು. ಕೇವಲ ದುಷ್ಕರ್ಮಗಳನ್ನು ಮಾಡಿದ್ದರೆ, ಘೋರ ನರಕಗಳಲ್ಲಿ ನರಳುವೆವು. ಪಾಪ, ಪುಣ್ಯಗಳ ಮಿಶ್ರಣದ ಫಲವಾಗಿ ಸಂಸಾರದಲ್ಲಿ ಪುನರ್ಜನ್ಮ ತಳೆಯುವೆವು. ಈ ಜನ್ಮದಲ್ಲಿ ಸಂಪಾದಿಸುವ ಪಾಪ ಪುಣ್ಯಗಳ ಹೊರೆ, ಮುಂದೆ ಯಾವ ಕುಟುಂಬ, ಕುಲ, ದೇಶ, ಸನ್ನಿವೇಶಗಳಲ್ಲಿ, ನಾವು ಜನಿಸಬೇಕಾಗುತ್ತದೆ ಅನ್ನುವುದನ್ನು ನಿರ್ಧರಿಸುತ್ತದೆ. ಪ್ರಾಣಿವರ್ಗಗಳಲ್ಲಿ ಎಲ್ಲವೂ ಪೂರ್ವನಿರ್ಧಾರಿತವಾಗಿದ್ದರೂ, ಮನುಷ್ಯನಿಗೆ ತನ್ನ ಮುಂದಿನ ಜೀವನವನ್ನು ಬದಲಿಸಿಕೊಳ್ಳುವಂತಹ ಸ್ವಾತಂತ್ರ್ಯ ಅತನ ವಿವೇಚನಾಯುಕ್ತವಾದ ಸತ್ಕರ್ಮಗಳ ಫಲದಿಂದ ಲಭಿಸುತ್ತದೆ. ಈ 'ಜೀವನ' ಎಂಬ ನಾಣ್ಯದ ಎರಡು ಮುಖಗಳೇ ಪಾಪ ಪುಣ್ಯಗಳು. ಸಂಸಾರದಲ್ಲಿ ಹಗಲು – ಇರುಳು, ಶೀತೋಷ್ಣಗಳು, ಯಾತನೆ– ಸಂತೋಷ, ಯೌವನ – ವೃದ್ಧಾಪ್ಯ, ಗಂಡು – ಹೆಣ್ಣು, ಹುಟ್ಟು – ಸಾವು ಇತ್ಯಾದಿ ದ್ವಂದ್ವಗಳು ನಿರಂತರವಾಗಿ ಇರುತ್ತವೆ. ದೈವಾಂಶ ಸಂಭೂತರೂ, ಭಗವದ್ ಅವತಾರಗಳೂ ಸಹ ಸಂಸಾರದಲ್ಲಿ 'ಜನಿಸಿದಾಗ' ತಮ್ಮ ಕರ್ಮಗಳಿಗನುಸಾರವಾಗಿ ಫಲ ಅನುಭವಿಸಲೇಬೇಕು.

ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ
ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್... (ಭಗವದ್ಗೀತಾ)

ಬೀಸುತ್ತಿರುವ ಗಾಳಿ ಆಯಾ ಪ್ರದೇಶದ ವಾಸನೆಗಳನ್ನು ತರುವಂತೆ, ಹಳೆಯ ದೇಹದ ಕರ್ಮ ಸಂಚಯವನ್ನು ಆತ್ಮ ಮುಂದಿನ ಜನ್ಮದಲ್ಲಿ ಹೊಸದೇಹಕ್ಕೆ ತರುತ್ತದೆ. ಇದನ್ನು ತಪ್ಪಿಸಲು ಅಸಾಧ್ಯ. ಸ್ಥೂಲದೃಷ್ಟಿಗೆ ಈ ಸೂಕ್ಷ್ಮ ಕರ್ಮಗಳ ಹೊರೆ ಅಗೋಚರ. ಶ್ರುತಿಯುಕ್ತವಾದ ಸಿದ್ಧಾಂತದಂತೆ ಕರ್ಮ ಮತ್ತು ಪುನರ್ಜನ್ಮ ಬಂಧನದಿಂದ ಬಿಡುಗಡೆ ಇಲ್ಲ. ಇಂದಲ್ಲ ನಾಳೆ ಕರ್ಮಫಲವನ್ನು ಅನುಭವಿಸಿಯೇ ತೀರಬೇಕು. ನಿಮ್ಮ ಮತ ಅಥವಾ ನಂಬಿಕೆಯಂತೆ ಕರ್ಮಸಿದ್ಧಾಂತವನ್ನು ಒಪ್ಪಿಕೊಳ್ಳದಿದ್ದರೂ – ಸತ್ಯ ಯಾವತ್ತೂ ಸತ್ಯವೇ. ಈ ದೈವೀ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ.

ನಹಿ ದೃಷ್ಟೇ ದೃಷ್ಟೇರ್ವಿಪರಿಲೋಪೋ ವಿದ್ಯತೆ... (ಬೃಹ. ಉಪ.)

ಮಾನವನ ದೃಷ್ಟಿ, ನಿಯಮಗಳು ನಮ್ಮ ತಪ್ಪುಗಳು, ದುಷ್ಕರ್ಮಗಳನ್ನೆಲ್ಲ

CC-0. Mumukshu Bhawan Varanasi Collection. Public Domain. Digitized by eGangotri

ಪತ್ತೆಹಚ್ಚಲು ಅಸಮರ್ಥವಾಗಿರುವ ಸಲ್ಲಾತ್ಮಕ ಪರಮಾತ್ಮನ ದೃಷ್ಟಿಯಲ್ಲಿ ಯಾರೂ ತಪ್ಪಿಸಿಕೊಳ್ಳಲಾರರು. ಆತನ ಆಣತಿ, ನಿಯಮ ಮೀರಲಸಾಧ್ಯ. ಎಲ್ಲೋ ಸ್ವರ್ಗದ ಮೂಲೆಯಲ್ಲಿ ಕುಳಿತು ಭಗವಂತ ನಮ್ಮ ಕರ್ಮಗಳ ಲೆಕ್ಕವಿಡುವುದಿಲ್ಲ. ನಮ್ಮ ಪ್ರತಿಕರ್ಮವೂ ಹೃದಯದಲ್ಲಿ ಸಂಸ್ಕಾರರೂಪವಾಗಿ ಅಚ್ಚೊತ್ತಾಗಿ ಉಳಿಯುತ್ತವೆ, ಹಾಗು ನಾವೇ ಅದರ ಫಲಾನುಭವಿಗಳು.

ಇಂದಿನ ಯುಗದ ಆಧುನಿಕ ವಿಜ್ಞಾನ – ತಾಂತ್ರಿಕತೆಯ ನೆರಳಲ್ಲಿ, ಮನುಕುಲ ದುರಾಸೆ, ಸ್ವಾರ್ಥ, ವಂಚನೆ, ನೀಚ ರಾಜಕೀಯ ಪ್ರಲೋಭನೆ, ಭೌತಿಕ ಸುಖ ಕಲ್ಪನೆ, ಪಾಖಂಡೀ ಸ್ವಯಂ ಘೋಷಿತ ಗುರುಗಳ ವರ್ತನೆಗಳಿಂದ ದಿಗ್ಭ್ರಮೆ ಹೊಂದಿ ಸನಾತನ ಧರ್ಮದಲ್ಲಿ ಶ್ರದ್ಧೆ ಇಲ್ಲದಂತಾಗಿ, ಸಂಪೂರ್ಣ ನಾಸ್ತಿಕತೆಯತ್ತ ನಡೆಯುತ್ತಿದೆ. ಬದುಕಿರುವಾಗ ಎಲ್ಲ ಸುಖಭೋಗಗಳನ್ನು ಅನುಭವಿಸುವುದೇ ತನ್ನ ಪರಮಗುರಿ ಎಂದು ಆಧುನಿಕ ಮಾನವ ಭಾವಿಸಿದ್ದಾನೆ. ಸಾವಿನ ನಂತರ ಮತ್ತೆ ಈ ಅವಕಾಶ ಬರದು ಅನ್ನುವ ಸಿದ್ಧಾಂತಕ್ಕೆ ಬದ್ಧನಾಗಿ ಎಲ್ಲ ರೀತಿಯ ಹೀನ, ಪೇಯ ಕೃತ್ಯಗಳನ್ನು ತನ್ನ ಸ್ವಾರ್ಥ ಸುಖ ಸಂತೋಷಗಳಿಗಾಗಿ ನಿರ್ಲಜ್ಜೆಯಿಂದ ಮಾಡುತ್ತಿದ್ದಾನೆ. ಆದರೆ ಎಲ್ಲದಕ್ಕೂ ಒಂದು ಕೊನೆ ಇದೆಯಲ್ಲವೆ ?

ಮಾ ಕುರು ಧನ ಜನಯೌವನ ಗರ್ವಮ್ । ಹರತಿ ನಿಮೇಷಾತ್ಕಾಲಃ ಸರ್ವಮ್ ॥

ನಿನ್ನ ಐಶ್ವರ್ಯ, ಯೌವನ, ಧನಬಲ, ಜನಬಲದ ಬಗ್ಗೆ ಗರ್ವಪಡಬೇಡ. ಮಹಾಕಾಲನು ಎಲ್ಲವನ್ನೂ ನಿಮಿಷಮಾತ್ರದಲ್ಲಿ ನುಂಗುವನು ಎಂದು ಭಗವಾನ್ ಆದಿ ಶಂಕರಾಚಾರ್ಯರು ತಿಳಿಸಿದ್ದಾರೆ.

ಕಾಲಕ್ರಮದಲ್ಲಿ ಎಲ್ಲವೂ ಬದಲಾಗುತ್ತದೆ. ಸಂತೋಷವು ಯಾತನೆಗೆ ದಾರಿಮಾಡಿಕೊಡುತ್ತದೆ. ಎಂತಹ ಶ್ರೀಮಂತ, ಪ್ರಭಾವಶಾಲಿ ಲೋಕಪ್ರಸಿದ್ಧ ಮಾನವನೂ ಒಂದಲ್ಲ ಒಂದು ದಿನ ಕಾಲ ಗರ್ಭದಲ್ಲಿ ಲಿಯಿಯುತ್ತಾನೆ. ಆದ್ದರಿಂದ ನಮ್ಮ ಪ್ರಾಚೀನ ಋಷಿಗಳ ಉಪದೇಶದಂತೆ, ಆಧುನಿಕ ಮಾನವ ಧರ್ಮವಂತನಾಗಿ, ಸದಾಚಾರಿಯಾಗಿ, ನೀತಿವಂತನಾಗಿ ಬಾಳಬೇಕು. ಭಗವಂತನಲ್ಲಿ ಸಂಪೂರ್ಣ ನಂಬಿಕೆ, ಶ್ರದ್ಧೆ ಇಟ್ಟು ನಿಷ್ಕಾಮ ಭಾವದಿಂದ ಸೇವೆ ಸಲ್ಲಿಸಬೇಕು. ಇದರಿಂದ ಮಾತ್ರ ಇಹ, ಪರಲೋಕಗಳಲ್ಲಿ ಶಾಂತಿ, ಆನಂದ, ಅಭ್ಯುದಯ ಸಾಧ್ಯ.

(ಸಶೇಷ)...

ಸರ್ವಮಂಗಲ ಮಾಂಗಲ್ಯೆ ಶಿವೆ ಸರ್ವಾರ್ಥಸಾಧಿಕೆ
ಶರಣ್ಯೆ ತ್ರಯಂಬಿಕೆ ದೇವಿ ನಾರಾಯಣಿ ನಮೋಸ್ತುತೆ.

CC-O. In Public Domain. Digitized by eGangotri

ಶ್ರೇಯಸ್

– ಶ್ರೀ ಬಿ.ಕೆ. ಶ್ರೀಕಂಠಯ್ಯ
ಬೆಂಗಳೂರು

ಮಾನವನಿಗೆ ಜೀವನದಲ್ಲಿ ತನ್ನ ಜೀವನ ಧ್ಯೇಯ ಸಾಧಿಸಲು ಎರಡು ಮಾರ್ಗಗಳಿವೆ. ಒಂದು ಶ್ರೇಯಸ್ ಮತ್ತೊಂದು ಪ್ರೇಯಸ್. ಯಮ ನಚಿಕೇತರ ಸಂವಾದದಲ್ಲಿ ಬರುವ ಯಮನು ಹೇಳಿದ ಮಾತು ಗಮನಾರ್ಹವಾಗಿದೆ. ವಿವೇಕಿಗಳು ಶ್ರೇಯೋಮಾರ್ಗವನ್ನವಲಂಬಿಸುತ್ತಾರೆ. ಬೇರೆಯವರು ಅಂದರೆ ಬಹಳಷ್ಟು ಜನರು ಪ್ರೇಯಸ್ ಮಾರ್ಗವನ್ನು ಅವಲಂಬಿಸುತ್ತಾರೆ. ಪ್ರೇಯಸ್ ಮಾರ್ಗವನ್ನನುಸರಿಸುವ ಜನರು ಚತುರ್ವಿಧ ಪುರುಷಾರ್ಥದಲ್ಲಿನ ಅರ್ಥ ಮತ್ತು ಕಾಮವನ್ನು ಅವಲಂಬಿಸಿರುತ್ತಾರೆ. ಅಂತಹ ಮಾರ್ಗದಲ್ಲಿ ಧರ್ಮವೂ ಸೇರುತ್ತದೆ. ಧರ್ಮ ಜೀವನವನ್ನೂ ಒಳಗೊಂಡಿರುತ್ತದೆ. ಮನಸ್ಸಿನಲ್ಲಿ ಏಳುವ ರಾಗ ದ್ವೇಷಗಳನ್ನು ನೆರವೇರಿಸಿಕೊಳ್ಳಲು ಧರ್ಮಾಧರ್ಮಗಳೂ ಸೇರಿರುತ್ತವೆ.

ಶ್ರೇಯಸ್ ಮಾರ್ಗವನ್ನು ಅನುಸರಿಸುವವರು ಎಲ್ಲೋ ಕೆಲವರು ಮಾತ್ರ. ಶ್ರೇಯಸ್ ಬಂಧಮುಕ್ತಿಯ ಮಾರ್ಗ. ಶ್ರೇಯಸ್ ಅಂದರೇನೇ ವಿಶೇಷಾರ್ಥದಲ್ಲಿ ಮೋಕ್ಷ, ಬಿಡುಗಡೆ ಎಂದಾಗುತ್ತದೆ. ಎಂತಹ ಬಿಡುಗಡೆ ಎಂದರೆ ಆತ್ಮಜ್ಞಾನದಿಂದ ದೊರಕುವ ಜನ್ಮ ಸಂಸಾರ ಬಂಧನದಿಂದ ಬಿಡುಗಡೆ – ಸಂಪೂರ್ಣ ಸ್ವಾತಂತ್ರ್ಯ ಪ್ರಾಪ್ತಿಯೇ ಆಗಿದೆ. ನಚಿಕೇತನು ಹಿಡಿದ ಪಟ್ಟನ್ನು ಬಿಡದೆ ಯಮನಿಂದ ಶ್ರೇಯಸ್ ಮಾರ್ಗವನ್ನು ಕೇಳಿ ತಿಳಿದುಕೊಂಡನು. ಈ ಅರಿವೇ ಬಂಧಮುಕ್ತಿ.

ಶ್ರೇಯಸ್ ಮಾರ್ಗವನ್ನು ಎರಡು ವಿಧದಲ್ಲಿ ಅರ್ಥೈಸಬಹುದು. ಒಂದು ನಿರಪೇಕ್ಷ ಇನ್ನೊಂದು ಸಾಪೇಕ್ಷ. ನಿರಪೇಕ್ಷ ಎಂದು ಅರ್ಥೈಸಿದಾಗ ಅದು ಎಲ್ಲ ದೇಶದಲ್ಲಿ ಎಲ್ಲ ಕಾಲಗಳಲ್ಲಿಯೂ ಎಲ್ಲರಿಗೂ ಹಿತಕಾರಿ ಎಂದಾಗುವುದು. ಇದು ಸರ್ವತ್ರ ಅನ್ವೈಸುವ ವಿಶೇಷಾರ್ಥದ ಪಾರಮಾರ್ಥಿಕ ದೃಷ್ಟಿಕೋನದ ಅರ್ಥ. ಶ್ರೇಯಸ್ ಜ್ಞಾನವೂ ಹೌದು. ಇದು ಜ್ಞಾನವಾದುದರಿಂದ ಇದರ ಬೋಧನೆ ಯಾವ ಬದಲಾವಣೆಯೂ ಇಲ್ಲದೆ ಏಕರೀತಿಯಲ್ಲಿರುತ್ತದೆ ಮತ್ತು ಸರ್ವಸಮ್ಮತವಾಗಿರುತ್ತದೆ. ಇದು ಯಾವ ಕಾಲದಲ್ಲಿಯಾಗಲೀ ಯಾವ ದೇಶದಲ್ಲಿಯಾಗಲೀ ಯಾವ ವ್ಯಕ್ತಿಗಾಗಿಯಾಗಲೀ ಬೋಧೆಯು ಯಾವೊಂದೂ ವ್ಯತ್ಯಾಸವಿಲ್ಲದೆ ನಿತ್ಯ ಸತ್ಯವಾಗಿರುತ್ತದೆ.

ಜ್ಞಾನವು ವ್ಯಕ್ತಿಯು ಪ್ರಾಪ್ತಿಸಿಕೊಳ್ಳಬಹುದಾದದ್ದು. ಇದು ಜ್ಞೇಯ ವಸ್ತುವಿನ ಪ್ರಕೃತಿ ಗುಣಕ್ಕೆ ಅನುಗುಣವಾಗಿರುತ್ತದೆ. ಇದು ವ್ಯಕ್ತಿಯ ಇಷ್ಟಾನಿಷ್ಟಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri
ಅವಲಂಬಿಸಿರುವುದಿಲ್ಲ. ಜ್ಞಾನವು ವಸ್ತುವಿನಲ್ಲಿಯೇ ಗುರುತಿಸಬಹುದಾದ ಜ್ಞಾನವಾಗಿರುತ್ತದೆ. ಅದನ್ನು ಇನ್ನೊಂದು ವಸ್ತುವೆಂದು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಅಂದರೆ ಜ್ಞಾನವು ಆ ವಸ್ತುವಿನದೇ ಆಗಿರುತ್ತದೆ. ಜ್ಞೇಯ ವಸ್ತು ಯಾವುದೋ ಅದು ಅದೇ ವಸ್ತುವಾಗಿರುತ್ತದೆ ಮತ್ತು ವಾಸ್ತವಿಕವಾಗಿರುತ್ತದೆ. ಉದಾಹರಣೆಗೆ ಅದು ಕಿತ್ತಲೆ ಹಣ್ಣಾಗಿದ್ದರೆ ಅದು ಕಿತ್ತಲೆ ಹಣ್ಣು ಮಾತ್ರವೇ ಆಗಿರುತ್ತದೆ. ಅದು ಕಿತ್ತಲೆ ಹಣ್ಣಲ್ಲದೆ ಬೇರೆಯದಾಗಿ ತಿಳಿದುಕೊಳ್ಳಲು ಸಾಧ್ಯವೇ ಇಲ್ಲ. ಅದು ಬೇರೆ ಬೇರೆ ವ್ಯಕ್ತಿಗಳ ಇಷ್ಟಾನಿಷ್ಟಗಳಿಗೊಳಪಟ್ಟು ದೃಢಪಡಿಸುವಂತಹುದಾಗಿರುವುದಿಲ್ಲ. ಅರ್ಥಾತ್ ಜ್ಞೇಯ ವಸ್ತುವಿನ ಜ್ಞಾನವು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯದಾಗಿರುವುದಿಲ್ಲ. ಅದು ಅಭಿನ್ನ ಏಕ ರೀತಿಯಲ್ಲಿರುತ್ತದೆ.

ಶ್ರೇಯಸ್ ಸಾಪೇಕ್ಷ (relative) ಎಂಬರ್ಥದಲ್ಲಿ ಬೆಳಸಿದಾಗ ಅದು ಕಾಲಮಿತಿಗೊಳಪಟ್ಟಿರುವಂತಹುದಾಗಿರುತ್ತದೆ. ಅಂದರೆ ಒಬ್ಬ ವ್ಯಕ್ತಿಗೆ ಒಂದು ಕಾಲದಲ್ಲಿ ಒಳ್ಳೆಯದಾಗಿದ್ದರೆ ಅದು ಎಲ್ಲಾ ಕಾಲದಲ್ಲಿಯೂ ಒಳ್ಳೆಯದಾಗಿಯೇ ಇರುವುದಿಲ್ಲ. ಒಂದು ಕಾಲಕ್ಕೆ ಹಿತವಾಗಿರಬಹುದು, ಇನ್ನೊಂದು ಕಾಲಕ್ಕೆ ಹಿತವಲ್ಲದೇ ಇರಬಹುದು. ಸರ್ವಕಾಲದಲ್ಲಿಯೂ ನಿರಂತರವಾಗಿ ಒಳ್ಳೆಯದಾಗಿಯೇ ಅಥವಾ ಹಿತವಾಗಿಯೇ ಇರತಕ್ಕದ್ದಲ್ಲ. ಇದು ವ್ಯಕ್ತಿವ್ಯಕ್ತಿಗೂ ಅನ್ವಯಿಸುತ್ತದೆ. ಉದಾಹರಣೆಗೆ ಹೊಟ್ಟೆ ನೋವಿಗೆ ತೆಗೆದುಕೊಳ್ಳಬಹುದಾದ ಒಂದು ಔಷಧ ಒಂದು ಕಾಲಕ್ಕೆ ಒಬ್ಬ ವ್ಯಕ್ತಿಗೆ ಅದು ಗುಣಕಾರಿಯಾಗಿರಬಹುದು. ಆದರೆ ಅದೇ ಔಷಧ ಎಲ್ಲ ವ್ಯಕ್ತಿಗಳಿಗೂ (ಹೊಟ್ಟೆ ನೋವು ಬಂದವರಿಗೆ) ಎಲ್ಲ ಕಾಲದಲ್ಲಿಯೂ ಗುಣಕಾರಿಯಾಗಲಾರದು. ಹೀಗೆ ಹಿತ ಅಥವಾ ಒಳ್ಳೆಯದಾಗಿರುವುದು ಸಾಪೇಕ್ಷವಾಗಿರುತ್ತದೆ. ಒಂದೇ ಬಗೆಯದಾಗಿರುವುದಿಲ್ಲ, ಬದಲಾವಣೆ ಹೊಂದುತ್ತಲೇ ಇರುತ್ತದೆ.

ಹಾಗೆ ನೋಡಿದರೆ ಎಲ್ಲ ವಿಜ್ಞಾನವೂ ಬರಿಯ ಬಾಧ. ಏನನ್ನೋ ಕಂಡು ಹಿಡಿದು ಬಳಿಕ ಅದು ಸರಿಯಲ್ಲ ಇನ್ನೊಂದು ಸರಿ ಎಂದು ಕಂಡುಕೊಂಡುಬಿಡಬಹುದು. ಅಂದರೆ ವಸ್ತು ಸತ್ಯವನ್ನು ಕಂಡು ಹಿಡಿಯುವಾಗ, ಹಿಂದೆ ಕಂಡುಹಿಡಿದಿರುವ ಸತ್ಯ, ಸತ್ಯವಾಗಿ ಉಳಿಯುವುದಿಲ್ಲ. ಏಕಂದರೆ ಅದು ತನ್ನ ಅಸ್ತಿತ್ವಕ್ಕೆ ಇನ್ನೊಂದು ವಸ್ತುವನ್ನವಲಂಬಿಸಿರುತ್ತದೆ ಎಂದು ಕಂಡು ಬರುತ್ತದೆ. ಅಂದರೆ ಸತ್ಯಯುತ ವಸ್ತು ತನ್ನ ಸತ್ಯವನ್ನು ಕಳೆದುಕೊಳ್ಳುತ್ತದೆ ಮತ್ತು ಅನಂತರವೂ ಅಸ್ತಿತ್ವದಲ್ಲಿರುವುದನ್ನು ಮುಂದುವರಿಸುತ್ತದೆ. ಸತ್ಯಾಸತ್ಯ ಅನ್ವೇಷಣೆಯಲ್ಲಿ ನಿರತರಾದವರಿಗೆ, ನಿರಂತರವೂ ನಿತ್ಯವೂ ಸತ್ಯವಾಗಿರುವುದರ ಅರಿವು ಉಂಟಾಗುತ್ತದೆ.

ಯಾವುದು ಒಳ್ಳೆಯದು, ಹಿತವಾದದ್ದು, ಯಾವುದು ಒಳ್ಳೆಯದಲ್ಲ ಹಿತವಾದದ್ದಲ್ಲ ಎಂಬುದು ದೇಶ, ಕಾಲ, ವ್ಯಕ್ತಿ ಮತ್ತು ಇನ್ನಿತರ ನಿಮಿತ್ತಗಳಿಂದ ಗೊತ್ತುಪಡಿಸಲ್ಪಟುವುದಾಗಿರುತ್ತದೆ.

CC-O. In Public Domain. Digitized by eGangotri

ಹಾಗೆಯೇ ನಾವು ಎಲ್ಲ ಕಾಲಕ್ಕೂ ದೇಶಕ್ಕೂ ವ್ಯಕ್ತಿಗೂ ಅನ್ವಯವಾಗುವುದಾಗಿ ತಿಳಿದ ನೀತಿಶಾಸ್ತ್ರ ಧರ್ಮಶಾಸ್ತ್ರ ಮೊದಲಾದ ಸಾಮಾಜಿಕ ಮೌಲ್ಯಗಳು ಕಾಲ ದೇಶ ನಿಮಿತ್ತಗಳಿಗನುಸಾರವಾಗಿ ಅನ್ವಯವಾಗುವಂತಹುದು. ಇದು ಹೀಗಿದ್ದರೇ ಒಳ್ಳೆಯದು ಎಂದು ಹೇಳುವುದಕ್ಕಾಗುವುದಿಲ್ಲ ಮತ್ತು ಹಾಗೆ ತಿಳಿಯುವುದಕ್ಕಾಗುವುದಿಲ್ಲ. ಅಂದರೆ ಸಂಪೂರ್ಣವಾಗಿ ಸತತವಾಗಿ ಒಳ್ಳೆಯದೆಂದು ಹೇಳುವುದಕ್ಕಾಗುವುದಿಲ್ಲ.

ಸತತವೂ ಸಂಪೂರ್ಣವಾಗಿ ಒಳ್ಳೆಯದಾಗಿರುವಂತಹುದು, ಎಲ್ಲ ಕಾಲ ದೇಶಗಳಲ್ಲಿಯೂ ಬದಲಾವಣೆ ಹೊಂದದೆ ಅಭಿನ್ನವಾಗಿ ಏಕರೀತಿಯಲ್ಲಿರುತ್ತದೆ. ಅಲ್ಲದೆ ಎಲ್ಲ ವ್ಯಕ್ತಿಗಳಿಗೂ ಅದರ ಅನ್ವಯವು ಸರ್ವಕಾಲದಲ್ಲಿಯೂ ಒಂದೇ ರೀತಿಯಲ್ಲಿರುತ್ತದೆ ಎಂದಾಯಿತು. ಶ್ರೇಯಸ್ ಎನ್ನುವುದು, ಮೋಕ್ಷ, ಬಿಡುಗಡೆ ಎಂಬರ್ಥದಲ್ಲಿ ಇದೇ ಆಗಿರುತ್ತದೆ. ಇದೇ ಆತ್ಯಂತಿಕವಾದ ಪರಮೋಚ್ಚವಾದ ಶ್ರೇಯಸ್ಸು. ಇದು ಸ್ವತಃ ಸಿದ್ಧವಾದದ್ದು, ಸಂಪೂರ್ಣವಾದದ್ದು, ಎಲ್ಲ ಬಂಧನಗಳಿಂದ ಮುಕ್ತವಾದದ್ದು. ಎಲ್ಲ ಪರಿಮಿತಿಗಳಿಂದ ಬಿಡುಗಡೆ ಹೊಂದಿರುವಂತಹುದು. ಪ್ರತಿಯೊಬ್ಬರೂ ಗಮನಿಸಬಹುದಾದದ್ದು ಈ ಶ್ರೇಯಸ್ ಮಾರ್ಗವೇ.

ಆತ್ಮವು ಪರಿಪೂರ್ಣವಾದದ್ದು. ಅದರ ಹೊರತು ಬೇರೇನೂ ಇರುವುದಿಲ್ಲ. ಇರುವುದೆಲ್ಲ ಅದೊಂದೇ. ಶ್ರೇಯಸ್ ಅಂದರೂ ಸಹ ಅದೇ ಆಗಿದೆ. ಅದನ್ನು ದೊರಕಿಸಿಕೊಳ್ಳುವವರೆಗೆ ಅದೇ ಲಕ್ಷ್ಯವೆನ್ನುವ ಹಾಗಿರುತ್ತದೆ. ಅದನ್ನು ದೊರಕಿಸಿಕೊಂಡ ಮೇಲೆ ಅದು ಪ್ರತ್ಯೇಕವಾಗಿ ಉಳಿಯುವುದಿಲ್ಲ. ಅದೇ ನೀನು ನೀನೇ ಶ್ರೇಯಸ್ – ಅದೇ ನಾನು – ನಾನೇ ಶ್ರೇಯಸ್ – ಅದೇ ಶ್ರೇಯಸ್‌ಗೆ ತದ್ವಿರುದ್ಧವಾದ ವಿಶೇಷಾರ್ಥದ ನಿರಪೇಕ್ಷ ಎಂಬ ಅರ್ಥದಲ್ಲಿನ ಶ್ರೇಯಸ್. ಅದೇ ಏಕಮೇವಾದ್ವಿತೀಯ ಪರಬ್ರಹ್ಮ ತತ್ವ.

ಓಂ ತತ್ಸತ್

(ಆಧಾರ)

* * *

ನೀವು ಹಂಸಾಶ್ರಮದ ಸದಸ್ಯರಾಗಲು ಇಚ್ಛಿಸಿದಲ್ಲಿ, ಇಂದೇ ಚಂದಾ ಹಣ ರೂ. 60=00 ಕಳಿಸಿಕೊಡಿ, ಹಾಗು ಇತರ ಆಸಕ್ತ ಬಂಧು ಭಗಿನಿಯರಿಗೆ ತಿಳಿಸಿ.

ಹಂಸಯೋಗ ಪತ್ರಿಕೆಗೆ ಲೇಖನಗಳನ್ನು ಕಳಿಸಲು ಇಚ್ಛಿಸುವವರು ಸ್ವಾಮೀಜಿಯವರ ಹಂಸಾಶ್ರಮದ ವಿಳಾಸಕ್ಕೆ ನೇರವಾಗಿ ಬರೆಯಬಹುದು.

CC-O. In Public Domain. Digitized by eGangotri

ಭಕ್ತಿಯ ನೆಲೆ – ಒಂದು ವಿವೇಚನೆ

– ಪ್ರೊ. ಟಿ.ಪಿ. ಭಟ್ಟಕಟ್ಟೆ, ನ್ಯಾಯ ಪ್ರಾಧ್ಯಾಪಕರು, ಗೋಕರ್ಣ - 581326
ಸಂಸ್ಕೃತ ವಿದ್ಯಾಲಯ

ಮಾನವ ಬದುಕಿನ ಮಜಲುಗಳು ತೀರ ವಿಭಿನ್ನವಾದುವುಗಳು, ಅಷ್ಟೇ ಅಲ್ಲ, ಅವುಗಳ ಗೊತ್ತುಗುರಿ, ಫಲಸಾಧನೆಗಳು ವಿಭಿನ್ನವಾಗಿವೆ. ಬದುಕಿನ ಉದ್ದಕ್ಕೂ ಆಯಾ ಹಂತದ ತೃಪ್ತಿ, ಅತೃಪ್ತಿಗಳು ಒಂದಲ್ಲ ಒಂದು ರೀತಿಯಿಂದ ಬದುಕಿನ ಅಚೆಯ ಸತ್ವವನ್ನೂ, ಸತ್ಯವನ್ನೂ ವಿವೇಚಿಸಲು ಮುಂದಾಗುತ್ತವೆ. "ತಪಸಾ ವೇದ ವಿದ್ವಾಂಸಃ ಪರಂತ್ವಮೃತಮಾಪ್ನುಯುಃ". ಈ ಹಿನ್ನೆಲೆಯಲ್ಲಿ ಉಪಾಸನೆಗಳ ಮಹತ್ವವು ಕಂಡುಬರುತ್ತದೆ. ಗುರಿಯನ್ನು ಸಾಧಿಸಿದ ತೃಪ್ತಿಯಲ್ಲಿಯೂ ಉಪಾಸನೆಯ ಕಡೆ ಮನಸ್ಸು ಹೊರಳುತ್ತದೆ. ತೃಪ್ತಿ ಇಲ್ಲದಾಗ ಕೂಡ ಉಪಾಸನೆಯ ಕಡೆಗೆ ಹೊರಳುವುದು ಅತ್ಯಂತ ಸಹಜ. ಈ ಹಿನ್ನೆಲೆಯಲ್ಲಿಯೇ ಮನುಷ್ಯನಿಗೆ ಒಂದಲ್ಲ ಒಂದು ಉಪಾಸನೆ ಅಥವಾ ಶ್ರದ್ಧಾಕೇಂದ್ರಗಳು ಅನಿವಾರ್ಯ ಎನಿಸುತ್ತವೆ ಕೂಡ. ವಿದ್ವಾಂಸರು, ಜ್ಞಾನಿಗಳು ಭೂತಾರಾಧನೆಯಿಂದ ಆರಂಭಿಸಿ ಬ್ರಹ್ಮೋಪಾಸನೆಯವರೆಗೆ ಎಲ್ಲವೂ ಸಹಜ ಮಾನಸಿಕ ಆರೋಗ್ಯದ ದೃಷ್ಟಿಯಿಂದ ಅತ್ಯಂತ ಪ್ರಸ್ತುತವೆಂದೇ ಅಭಿಪ್ರಾಯ ಪಡುತ್ತಾರೆ. ಉಪಾಸನಾ ಮಾರ್ಗಗಳಲ್ಲಿ ಭಿನ್ನತೆಯಿದ್ದರೂ ಗುರಿ ಮಾತ್ರ ನಿಚ್ಚಳ. ಅದು ಅವನದೇ ಆದ ಅಂತಸ್ಥಿಗೆ ಕುರಿತಾದುದು. ಅನೇಕ ದೇವತೋಪಾಸನೆ ಅಥವಾ ಬಹುಮುಖಿ ಉಪಾಸನೆ ಮೆಚ್ಚುಗೆಗೆ ಪಾತ್ರವಾಗಿಲ್ಲವಾದರೂ, ಏಕೋಪಾಸನೆ ಮೇಲ್ಮಟ್ಟದ ಮಾನಸಿಕ ಪದವನ್ನು ಬಯಸುತ್ತದೆ. ಏನೇ ಇರಲಿ, ಅನಿವಾರ್ಯವಾದ ಈ ಉಪಾಸನೆಗಳ ಮೂಲವನ್ನು ವಿಚಾರ ಮಾಡೋಣ.

ಇಂದಿನ ಭೌತಿಕ ಜೀವನದ ಹಂತಗಳಲ್ಲಿಯೂ ಅನಿವಾರ್ಯವಾಗುವ ಈ ಶ್ರದ್ಧಾಕೇಂದ್ರಗಳ ಹಿನ್ನೆಲೆಯನ್ನು ಅರಿಯಬೇಕು. ಯಾಂತ್ರಿಕ ಬದುಕಿನ ಸನ್ನಿವೇಶಗಳಲ್ಲಿ ಒಂದಲ್ಲ ಒಂದು ರೀತಿಯ ಅಧ್ಯಾತ್ಮಭಾವವು ಪರಳುಗಟ್ಟುತ್ತಲೇ ಇದೆ. ಗುರಿಮುಟ್ಟುವ ತವಕದಲ್ಲಿ ಪ್ರಸ್ತಕವಾಗುವ ಸಾಧನೆಗಳು ಹಲವು. ಜೀವನಕ್ಕೆ ಆಪ್ಯಾಯಮಾನವೆನಿಸುವುದು ಜ್ಞಾನಮಾರ್ಗದ ಪರಮಗುರಿಯಾದ ಭಗವಂತನಾದರೂ ಇಂದಿನ ಬದುಕಿನಲ್ಲಿ ಅಂತಹ ವಾತಾವರಣವೇ ದುರ್ಲಭ. ಕರ್ಮದ ಅನುಷ್ಠಾನಗಳು ನಾನಾ ವಿಧವಾದ ಆಕ್ಷೇಪಗಳಿಗೆ ಗುರಿಯಾಗಿವೆ. ಇಂತಿರುವಾಗ ಭಕ್ತಿಯೊಂದು ತನ್ನ ಆಯಾಮಗಳನ್ನು ವಿಸ್ತರಿಸಿಕೊಳ್ಳುತ್ತಾ ಸಾಗಿದೆ. ಹಳ್ಳಿಗರೆಂದು, ಪಟ್ಟಣಿಗರೆಂದು ಭೇದ ಇದಕ್ಕಿಲ್ಲ. ಬಡವ ಶ್ರೀಮಂತನೆಂಬ ವ್ಯತ್ಯಾಸ ಇಲ್ಲಿ ಕಂಡುಬರುವುದಿಲ್ಲ. ಮತ್ತು ಶಿಕ್ಷಿತ ಅಶಿಕ್ಷಿತನೆಂಬ ಪರಿವೆ ಇಲ್ಲ. ಸತ್ಯದ ಸ್ವರೂಪವೆಂದರೂ, ಶಾಂತಿಯ ನೆಲೆಯೆಂದರೂ ಅಖಂಡಾನಂದದ ಅನುಭವವೆಂದರೂ

CC-O. In Public Domain. Digitized by eGangotri
ಅದಕ್ಕೊಂದು ನೆಲೆ ಬೇಕಾಗಿರಲಿಲ್ಲ. ಅದಕ್ಕೆ ಅಂತಹ ಅಗತ್ಯವೂ ಇರಲಿಲ್ಲ. "ತದ್ವಿಜ್ಞಾತೆ ಸರ್ವಂ ವಿಜ್ಞಾತಂ ಭವತಿ" ಇಂತಹ ನೆಲೆಯೊಂದು ಅನಿವಾರ್ಯವಷ್ಟೇ ಅಲ್ಲ, ಅತ್ಯಂತ ಸಹಜ.

ಬದುಕಿನ ಅತೃಪ್ತಿ, ಅಶಾಂತಿ, ಕ್ಲೈರ್ಯ, ಅಸಾಧ್ಯತೆಗಳ ಮಡುವಿನಲ್ಲಿ ಗುರಿಯನ್ನು ಅರಸಲು ಬೇಕಾದ ಬೆಳಕು ಭಕ್ತಿಯಿಂದರೆ ಎಲ್ಲರಿಗೂ ಅರ್ಥವಾಗುವ ಮಾತು. ಭಕ್ತಿಯ ಗುರಿಯೇನು ? ಆ ಗುರಿಯೇ ಪರಮಾತ್ಮ ಎಂಬುದರಲ್ಲಿ ಎರಡಿಲ್ಲ. "ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಂ". ಭಕ್ತಿಮಾರ್ಗದ ಹಂತ ಹಂತಗಳೂ ಕೂಡ ಇಂದಿನ ಬದುಕಿಗೆ ತಕ್ಷಣದ ನೋವು ನಿವಾರಕಗಳಾದರೆ ಅಂತಿಮ ಲಕ್ಷ್ಯವಾದ ಪರಮಾತ್ಮನು ಜೀವನದ ಪರಮೋದ್ದೇಶವಾಗಿ ಸಲ್ಲುತ್ತಾನೆ. ಅದುದರಿಂದಲೇ ಜೀವನದ ಯಾಂತ್ರಿಕ ಹಂತಗಳಲ್ಲಿಯೂ ಭಕ್ತಿಯು 'ಫೀನಿಕ್ಸಿ'ನಂತೆ ಅಮೃತ ಸಿಂಚನವಾಗಿ ಸಲ್ಲುತ್ತಲೇ ಬಂದಿದೆ. ಇಂತಹ ಭಕ್ತಿಯ ಸ್ವರೂಪವೇನು ? ಅದು ದಾಸ್ಯ ಭಾವವೆ ? ಶರಣಾಗತಿಯೇ ? ಪರಸ್ಪರ ತಿಳುವಳಿಕೆಯೆ ? ಎಂಬಿತ್ಯಾದಿ ಪ್ರಶ್ನೆಗಳು ಅನೇಕ. ಇವುಗಳ ಮಾರ್ಗವನ್ನು ಬೇರೆ, ಬೇರೆಯಾಗಿ ವಿವೇಚಿಸುವ ಪಂಥಗಳೇ ಇವೆ. ಪ್ರಸಿದ್ಧವಾದ ನಾರದ ಭಕ್ತಿ ಸೂತ್ರವು "ಸಾತ್ವಸ್ಮಿನ್ ಪರಪ್ರೇಮರೂಪಾ" ಎಂದು ಸೂತ್ರಿಸುತ್ತದೆ. ಮೇಲು ನೋಟಕ್ಕೆ ಭಕ್ತಿಯು ಪ್ರೇಮರೂಪವಾದದ್ದು ಎಂಬ ಅರ್ಥ ಕಂಡುಬಂದರೂ ಭಕ್ತಿಯ ಮೂಲನೆಲೆ ಇದರಲ್ಲಿ ಅಡಗಿದೆ, ಪರಪ್ರೇಮ ಎನ್ನುವಾಗ ಜೀವನಿಗಿಂತ ಶ್ರೇಷ್ಠನಾದ ಭಗವಂತನಲ್ಲಿ ಪ್ರೀತಿ ಎದ್ದು ತೋರುತ್ತದೆ. ಬದುಕಿನಲ್ಲಿ ನಾವು ಅನುಭವಿಸುವ ಪ್ರೇಮ ಮತ್ತೊಂದನ್ನು ಅವಲಂಬಿಸುತ್ತದೆಯಾದರೂ ಅದು ಭಗವಂತನನ್ನು ಉದ್ದೇಶಿಸಿಲ್ಲ. ಹೆಂಡತಿ, ಮಕ್ಕಳು ಮುಂತಾದವರನ್ನು ಅದು ಸೂಚಿಸುತ್ತದೆ. ಪರಪ್ರೇಮವೆಂದರೆ ಎಲ್ಲರ ಅರಿವಿಗೂ ಬರಲು ಸಾಧ್ಯವಿಲ್ಲ. ತಾಯಿಮಗು, ಗಂಡ–ಹೆಂಡತಿ, ಗೆಳೆಯ–ಗೆಳತಿ, ಎಂಬ ಸ್ತರವನ್ನು ಮೀರಿ ನಿಂತಿರುವುದು. ಅದೇ ಪರಪ್ರೇಮ. ಪರಮಪ್ರೇಮವೆಂಬ ಪಾಠವೂ ಇದೆ. ಸಂಸಾರದಲ್ಲಿ ನಾವು ಅನುಭವಿಸುವ ಪ್ರೇಮಕ್ಕೆ ಫಲ ಎಂಬುದೊಂದು ಇದ್ದೇ ಇದೆ. ಅದು ಸಂಪತ್ತು, ಸುಖ ಇಂಥವುಗಳು. ಪರಪ್ರೇಮ ಎಂಬ ಪದ ಅರ್ಥಪೂರ್ಣವಾದುದು. ಭಗವಂತನನ್ನು ಕುರಿತಾದ ಪ್ರೇಮದಲ್ಲಿ ಗುರಿ ಮತ್ತೊಂದಿಲ್ಲ. ಫಲಸಾಧನೆಯ ಅವಶ್ಯಕತೆ ಕಂಡುಬರುವುದಿಲ್ಲ. ವ್ಯಾವಹಾರಿಕ ಪ್ರೇಮದಲ್ಲಿ ಫಲಸಾಧನೆಯೇ ಮುಖ್ಯ ಗುರಿ. ಪರಪ್ರೇಮವೆಂದು ಬಣ್ಣಿಸಲಾದ ಭಗವಂತನಲ್ಲಿ ನಾವು ಹೊಂದುವ ಪ್ರೇಮಕ್ಕೆ ಬೇರೆ ಫಲಸಾಧನೆಯಿಲ್ಲ. ಅದು ಬೇಕೂ ಇಲ್ಲ. ಭಗವಂತನಲ್ಲಿ ಪ್ರೇಮವೇ ಗುರಿ. ಅಭೂತಪೂರ್ವವಾದ ಈ ತತ್ವವನ್ನು ಅರಿತಾಗ ಭಕ್ತಿಯ ನೆಲೆ–ಬೆಲೆ ಗುರಿಗಳೆಲ್ಲವೂ ಪರಮಾತ್ಮನೇ ಆಗಿ ಸಲ್ಲುತ್ತಾನೆ.

ನಾರದರು ಮುಂದುವರಿದು ಭಕ್ತಿಯ ಸ್ವರೂಪವನ್ನು ನಿರ್ದೇಶಿಸುವಾಗ 'ಅಮೃತ ಸ್ವರೂಪಾ' ಎನ್ನುತ್ತಾರೆ. ಈ ಅಮೃತ ತತ್ವವು ಬದುಕಿಗಿಂತ ಹೆಚ್ಚಾಗಿ ಅದರ ಅಚೆಗಿನ

CC-0. In Public Domain. Digitized by eGangotri

ತಥ್ಯವನ್ನು ರೂಪಿಸುತ್ತದೆ. "ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ" ಇತ್ಯಾದಿ ಭವಚಕ್ರದ ಆಚೆಗೆ ನಿಲ್ಲುವ ಸ್ಥಿತಿಯನ್ನು ಅಮೃತತತ್ವವು ಬೋಧಿಸುತ್ತದೆ. ಆದುದರಿಂದಲೇ ಭಕ್ತಿಯು ಕೇವಲ ಸಾಧನವಾಗಿ ಉಳಿಯುವುದಿಲ್ಲ ಅಷ್ಟೇ ಅಲ್ಲ ಭಕ್ತನ ಸ್ಥಿತಿಯನ್ನು ಭಕ್ತಿಯೇ ಎಂದು ತೆರೆದು ತೋರಿಸುತ್ತದೆ. ಇಲ್ಲಿ ಭೇದವೇ ಕಂಡುಬರುವುದಿಲ್ಲ. ಸಾಮಾನ್ಯ ನಂಬಿಕೆಯಂತೆ 'ಭಕ್ತನು – ಭಕ್ತಿಯಿಂದ' ಎಂಬ ಭೇದವನ್ನು ಅಳಿಸಿ ಅಮೃತ ಪ್ರೇಮದ ಸ್ಥಿತಿಯನ್ನು ಪ್ರತಿಪಾದಿಸುತ್ತದೆ. ಅನುಭವದಲ್ಲಿಯೂ ಭಗವಂತನು ಗುರಿಯಾಗಿ ಸಂದರೆ ಮುಂದೆ ಗುರಿತಪ್ಪಿದರೇನು ಎಂಬ ಚಿಂತೆ ಅಥವಾ ಶಂಕೆ ಉಂಟಾಗುವುದು. ಆದುದರಿಂದಲೇ ಪ್ರೇಮರೂಪವಾದ ಭಕ್ತಿಯು ಭಗವಂತನನ್ನು ಗುರಿಯೆಂದು ಪರಿಗಣಿಸುವುದಿಲ್ಲ. ಅದನ್ನು ಅಖಂಡವಾದ ಅನುಭವವೆಂದು ಸಾರುತ್ತದೆ. ಈ ಪ್ರೇಮಾನಂದದ ಅನುಭವದಲ್ಲಿ ನಾವು ಒಂದು ರೀತಿಯ ಅದ್ವೈತಭಾವದ ಅನುಭೂತಿಯ ಕಡೆಗೆ ಸಾಗುವುದನ್ನು ಗಮನಿಸಬಹುದು. ನಾರದರ ನಿರ್ದೇಶದಂತೆ "ಯಲ್ಲಬ್ಧ್ವಾ ಪುಮಾನ್ ಸಿದ್ಧೋ ಭವತಿ, ಅಮೃತೋಭವತಿ, ತೃಪ್ತೋ ಭವತಿ" ಎಂಬುದು ಸತ್ಯವಾಗಿ ಸಲ್ಲುತ್ತದೆ.

"ಯಲ್ಲಬ್ಧ್ವಾ" ಎಂದು ಆರಂಭವಾಗುವ ಭಕ್ತಿಯ ಅನುಭವದಲ್ಲಿ ಭಗವಂತನಿಂದ ಪಡೆದದ್ದು ಅಥವಾ ಭಗವಂತನು ದಯಪಾಲಿಸಿದ್ದು ಎಂಬ ಅರ್ಥದೊಡನೆ ಭಕ್ತಿಯ ಅನುಭವವು ಪ್ರೇಮಪೂರಿತ ನಿಷ್ಠೆಯಾಗಿ ಪರಿಣಮಿಸುವುದು. ಇದು ನಾವು ಮತ್ತು ಭಗವಂತ ಎಂಬ ನೆಲೆಯಲ್ಲಿ ಗಟ್ಟಿಗೊಳ್ಳುತ್ತದೆ. ತತ್ವಶಾಸ್ತ್ರದಲ್ಲಿ ಪ್ರಸಿದ್ಧವಾದ ಈಶ್ವರವಾದಕ್ಕೆ ಭಕ್ತಿಯ ನೆಲೆ ಎಂದು ವಿವರಣೆಗೊಳ್ಳುವುದನ್ನು ನಾವು ಕಾಣುತ್ತೇವೆ. ಭಕ್ತಿಯಲ್ಲಿ ಒಂದು ರೀತಿಯ ಸಾಮಾಜಿಕತೆ, ಸಮಾಜವನ್ನು ಹಸನುಗೊಳಿಸುವ ಪ್ರವೃತ್ತಿ ಸದಾ ಇದ್ದೇ ಇದೆ. ಇಲ್ಲಿ ಕುಲಗೋತ್ರಗಳ, ಮೇಲು ಕೀಳುಗಳ ಭಾವ ಅಡ್ಡ ಬರುವುದಿಲ್ಲ. ಭಗವದ್ಗೀತೆಯ ಈ ಮಾತು ಒಂದು ಸೊಗಸಾದ ನಿರೂಪಣೆ. "ಮಚ್ಚಿತ್ತಾಃ ಮದ್ಗತಪ್ರಾಣಾಃ ಬೋಧಯಂತಃ ಪರಸ್ಪರಂ ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿಚ".

ಭಗವಂತನಲ್ಲಿ ಪ್ರೇಮಪೂರಿತವಾದ ನಿಷ್ಠೆಯು ಭಕ್ತನನ್ನೂ ಅವನ ಸಮಾಜವನ್ನು ಕೂಡಿಯೇ ಆನಂದದ ನೆಲೆಗೆ ತಲುಪಿಸುತ್ತದೆ. ಯೋಗ ಸಿದ್ಧಾಂತವು ವಿಕಾಂತದಲ್ಲಿ ಸಾಧಕನೊಬ್ಬನ ಆನಂದಕ್ಕೆ ಮಾತ್ರ ಅವಕಾಶವನ್ನೀಯುತ್ತದೆ. ಅಲ್ಲಿ ಅಷ್ಟಾಂಗಯೋಗದಿಂದ ಲಭಿಸುವ ಭಗವಂತ ದಕ್ಕುವುದು ಅವನೊಬ್ಬನಿಗೇ. ಭಕ್ತಿಯ ನಲೆ ಭಗವಂತನಾದರೂ ಗುರು ಮತ್ತಿತರ ಕಡೆಗೂ ಹರಿಯುತ್ತದೆ. ಪರಮ ಗುರಿಯಾದ ಭಗವಂತನನ್ನು ಪಡೆದ ಮೇಲೆ ಭಕ್ತನಾದವನಿಗೆ ಸಂಸಾರವೇನೂ ಉಳಿದಿರುವುದಿಲ್ಲ. "ಯಜ್ಞಾತ್ವಾ ಮತ್ತೋ ಭವತಿ" ಎಂಬ ಸೂತ್ರವು ಮೇಲುನೋಟಕ್ಕೆ ಜ್ಞಾನವೆಂಬಂತೆ ಕಂಡರೂ ಪರಮ ಲಕ್ಷ್ಯವಾದ ಭಗವಂತನನ್ನು ಪಡೆದ ಮೇಲಿನ ಸ್ಥಿತಿಯನ್ನು ವರ್ಣಿಸುತ್ತದೆ. "ಆತ್ಮಾರಾಮೋ ಭವತಿ"

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ಮಾತು ನಾರದರ ಹೃದಯದಿಂದ ಬಂದಂತೆ ನಮ್ಮೆಲ್ಲರ ಹೃದಯದಿಂದಲೂ ಬರಬೇಕು. ಹೃದಯ ಕಮಲವು ದೇವರ ಗುಡಿಯಾಗಿ ಸಂದಾಗ ಮಾತ್ರ ಈ ಭಾವವು ಅರಳಬಹುದಾಗಿದೆ. "ಸರ್ವೆ ಆತ್ಮಾನಃ ಸಮರ್ಪಿತಾಃ" ಎಂಬ ಉಪನಿಷತ್ ಸಂದೇಶದಂತೆ ಭಕ್ತಿಭಾವದ ತನ್ಮಯತೆಯು ಪರಮ ಪ್ರೇಮರೂಪವಾದುದು. "ನಾರದಸ್ತು ತದರ್ಪಿತಃ ....." ಎಂಬಂತೆ ಶರಣಾಗತಿಯನ್ನೆ ಬೋಧಿಸುತ್ತಾರೆ. ಅವರ ದೃಷ್ಟಿಯಿಂದ ಗೋಪಿಯರು ಗೋಪಾಲನಲ್ಲಿ ಇಟ್ಟ ನಿರ್ವ್ಯಾಜ ಪ್ರೇಮ ಭಕ್ತಿಗೆ ಉದಾಹರಣೆಯಾಗಿದೆ.

ಭಕ್ತಿಯನ್ನು ಕೇವಲಾನಂದರೂಪವಾಗಿ ಅಥವಾ ಸಮರ್ಪಣೆಯ ರೂಪವಾಗಿ ವಿವೇಚಿಸುವಾಗ ಅದರ ನೆಲೆ-ಬೆಲೆಗಳಲ್ಲಿ ಪರಪ್ರೇಮದ ಅಗಾಧತೆಯನ್ನು ಅನುಭವಿಸುತ್ತೇವೆ. ಅದ್ವೈತ ಭಾವದಲ್ಲಿ ಪರಪ್ರೇಮವು ಬ್ರಹ್ಮದ ನೆಲೆಯನ್ನು ಗುರುತಿಸಿದರೆ ಪ್ರಪತ್ತಿ ಭಾವದಲ್ಲಿ ಭಗವಂತನೆಂಬ ನೆಲೆಯನ್ನು ಮುಟ್ಟುತ್ತದೆ. "ತಸ್ಮಿನ್ ಜಗತ್ಸರ್ವಮಿದಂ ಪ್ರತಿಷ್ಠಿತಂ" ಎಂಬಂತೆ ಇಂದು ಪರಪ್ರೇಮರೂಪವಾದ ಭಕ್ತಿಯು ತನ್ನ ನೆಲೆಗಳನ್ನು ಸ್ಪಷ್ಟಗೊಳಿಸುತ್ತಾ ಸಾಗಿದೆ. ಅಷ್ಟೇಕೆ ಆಧುನಿಕ ಪ್ರಪಂಚದಲ್ಲಿಯೂ ಅಡೆತಡೆಯಿಲ್ಲದ ಪ್ರೇಮದ ನೆಲೆಯಾಗಿ ಸಾಗುತ್ತಲೇ ಇದೆ. ಶಾಶ್ವತದ ಕಡೆಗೆ ನಮ್ಮನ್ನು ನಡೆಸುವ 'ಪ್ರೇಮ' ಮಾರ್ಗವಾಗಿ ಪ್ರಸ್ತುತವಾಗಿಯೇ ಉಳಿದಿದೆ. ಬೆಳೆಯುತ್ತಿದೆ ಕೂಡ.

* * *

ಗೀತಾ ಜಯಂತಿ ಕಾರ್ಯಕ್ರಮ : ಭಾನುವಾರ (19-12-99). ಆಸಕ್ತರು ಡಿಸೆಂಬರ್ 5ರ ವೇಳೆಗೆ ಸ್ವಾಮೀಜಿಯವರಿಗೆ ನೇರವಾಗಿ ತಿಳಿಸುವುದು. ಬೆಳಿಗ್ಗೆ 11.00ಕ್ಕೆ ಶ್ರೀಕೃಷ್ಣ ಪೂಜೆ, ಅಖಂಡ ಗೀತಾ ಪಾರಾಯಣ, ಪ್ರಸಾದ ವಿನಿಯೋಗ, ನಂತರ ಸ್ವಾಮೀಜಿಯವರ ವ್ಯಾಖ್ಯಾನವುಳ್ಳ "The Science of Bhagavad Geetha" ಪುಸ್ತಕದ ಬಿಡುಗಡೆ. ಈ ಪುಸ್ತಕವು ಈಗಾಗಲೆ ಜಪಾನ್ ದೇಶದಲ್ಲಿ ಅಲ್ಲಿಯ ಭಾಷೆಯಲ್ಲಿ ಬಿಡುಗಡೆಯಾಗಿದೆ (ಜೂನ್ 1998.). ನಂತರ ಪ್ರಶ್ನೋತ್ತರ ಕಾರ್ಯಕ್ರಮ ಸಂಜೆ 5ಘಂಟೆಗೆ ಮುಕ್ತಾಯ.

ಸ್ವಾಮೀಜಿಯವರ ಅಣುಸೋಣೆಯ ಹಂಸಾಶ್ರಮದ ವಿಳಾಸಕ್ಕೆ ನೇರವಾಗಿ ಇಂಗ್ಲೀಷ್, ಕನ್ನಡ, ಹಿಂದಿ ಹಾಗು ಸಂಸ್ಕೃತದಲ್ಲಿ ಪತ್ರವ್ಯವಹಾರ ನಡೆಸಬಹುದು.

CC-O. In Public Domain. Digitized by eGangotri

ಪ್ರಶ್ನೋತ್ತರಗಳು

– ಶ್ರೀ ಯುಗಂಧರ, ಬೆಂಗಳೂರು

ಪ್ರಶ್ನೆ : ನಾನು ಮುಕ್ತಿ (ಮೋಕ್ಷ)ಯನ್ನು ಯಾಕೆ ಪಡೆಯಬೇಕು ?

ಹಂಸ : ನೀನು ಮುಕ್ತಿ ಪಡೆಯಬೇಕೆಂದು ಯಾರೂ ಹೇಳುವುದಿಲ್ಲ. ನಿನಗದು ಬೇಕಿಲ್ಲದ ಪಕ್ಷದಲ್ಲಿ, ಅದರ ಬಗ್ಗೆ ಯೋಚನೆ ಯಾಕೆ ?

ಪ್ರಶ್ನೆ : ಆದರೆ ಎಲ್ಲ ಧರ್ಮಗ್ರಂಥಗಳಲ್ಲಿ, ಉಪದೇಶಗಳಲ್ಲಿ, ಶಾಸ್ತ್ರಗಳಲ್ಲಿ ಮುಕ್ತಿಯ ಬಗ್ಗೆ ಹೇಳಲ್ಪಟ್ಟಿದೆಯಲ್ಲ ?

ಹಂಸ : ನಿನಗೆ ಮುಕ್ತಿಯ ಬಗ್ಗೆ ಇಚ್ಛೆ ಇಲ್ಲದಿದ್ದರೆ, ಅಂತಹ ಗ್ರಂಥಗಳನ್ನು ಓದುವ ಅವಶ್ಯಕತೆಯೇ ಇಲ್ಲ. ಒಬ್ಬ ರೋಗಿಯು ಡಾಕ್ಟರ್ ಹತ್ತಿರ ಹೋಗುತ್ತಾನೆ. ಆರೋಗ್ಯವಂತ ಮಾನವನಾಗಲಿ ಅಥವಾ ದೈಹಿಕ ತೊಂದರೆ ಅನುಭವಿಸುತ್ತಿದ್ದರೂ, ತನಗೆ ಯಾವ ರೀತಿಯ ತೊಂದರೆ ಇಲ್ಲವೆಂದು ಸದಾಕಾಲ ಭಾವಿಸುತ್ತಿರುವ ವ್ಯಕ್ತಿಯಾಗಲಿ ಡಾಕ್ಟರ್ ಹತ್ತಿರ ಹೋಗುವುದಿಲ್ಲ. ಅಲ್ಲವೆ ?

ಪ್ರಶ್ನೆ : ಮುಕ್ತಿ ಯಾರಿಗೆ ? ಈ ದೇಹ ನಶ್ವರ. ಇಂದಲ್ಲ ನಾಳೆ ಬಿದ್ದು ಹೋಗುವಂತದ್ದು. ಈ ದೇಹಧಾರಿಯಾದ ಆತ್ಮವಾದರೋ ಅವಿನಾಶಿ, ಅನಾದಿ, ಅಮರ. ಅದಕ್ಕೆ ಹೊಸದಾಗಿ ಮುಕ್ತಿ ಅನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹೀಗಿದ್ದಾಗ ಯಾರಿಗೆ ಮುಕ್ತಿ ? ಬಹುಶಃ ಮನಸ್ಸಿಗೆ ಅಂತ ತೋರುತ್ತದೆ. ನಿರಂತರ ದುಃಖ, ತೊಂದರೆ, ಕಷ್ಟ, ನೋವು, ಸುಖ, ನಲಿವು, ಇವುಗಳಿಂದ ಬಿಡುಗಡೆಯೇ ಮುಕ್ತಿಯೇ ? ಜೀವನದಲ್ಲಿ ಬರುವ ಸುಖ, ದುಃಖಗಳಿಂದ ತೊಂದರೆ ಏನಿದೆ ? ನಾನು ಸುಖಿವನ್ನಾಗಲಿ ದುಃಖಿವನ್ನಾಗಲಿ ಸಮಾನವಾಗಿ ಅನುಭವಿಸುತ್ತ ತೃಪ್ತಿಯಿಂದ ಇರಬಲ್ಲೆ. ಹೀಗಿದ್ದರೂ ನಾನು ಮುಕ್ತಿಗಾಗಿ ಪ್ರಯತ್ನಿಸಬೇಕೆ ?

ಹಂಸ : ಇಲ್ಲ. ನೀನು ನಿಖಿರವಾಗಿ, ಸಂತೋಷಮಯನಾಗಿ ಸರ್ವದಾ ಜೀವಿಸಬಲ್ಲೆಯಾದರೆ, ನಿನಗೆ ಮುಕ್ತಿಯ ಅವಶ್ಯಕತೆಯೇ ಇಲ್ಲ. ರೋಗದಿಂದ, ತೊಂದರೆಯಿಂದ ಉದ್ಭವಿಸಿದ ಯಾತನೆ ಸಂಕಟಗಳು ನಿನಗೆ ಇಲ್ಲವಾದರೆ, ವೈದ್ಯನ ಬಳಿ ಹೋಗುವ ಪ್ರಶ್ನೆಯೇ ಇಲ್ಲ.

Sri Vidyabharathi Book Centre, Sringeri

ಪ್ರಶ್ನೆ : ಹೌದು. ನಿಜವಾಗಿಯೂ ನಾನು ಆನಂದವಾಗಿದ್ದೇನೆ. ನಾನು ಸುಖ-ದುಃಖಿಗಳ ದ್ವಂದ್ವದಿಂದ ಹೊರಬಂದಿದ್ದೇನೆ.

CC-O. In Public Domain. Digitized by eGangotri

ಹಂಸ : ಒಳ್ಳೆಯದು, ಹಾಗಾದರೆ ನೀನು ಈಗಾಗಲೆ ಮುಕ್ತನಾಗಿರಬೇಕು ಇಲ್ಲವಾದರೆ ಕಲ್ಲಿನಂತೆ ಜಡನಾಗಿರಬೇಕು.

ಪ್ರಶ್ನೆ : ಅರ್ಥವಾಗಲಿಲ್ಲ. ದಯವಿಟ್ಟು ವಿವರಿಸಿ.

ಹಂಸ : ಒಂದು ಕಲ್ಲು ಜಡವಸ್ತು. ಅದಕ್ಕೆ ಆಲೋಚನೆಗಳಾಗಲಿ ಮನಸ್ಸಾಗಲಿ ಇಲ್ಲ. ಮಳೆ, ಗಾಳಿ, ಛಳಿ, ಬೆಂಕಿಯಲ್ಲಿದ್ದರೂ ಅದಕ್ಕೆ ಯಾವ ಯೋಚನೆ, ಯಾತನೆ ಇಲ್ಲ. ಸುಖ-ದುಃಖಿವಾಗಲಿ ಇಲ್ಲ. ಅದೇ ರೀತಿ ಜೀವನ್ಮುಕ್ತನು ವ್ಯವಹರಿಸುತ್ತಾನೆ. ಭೌತಿಕ ದೇಹಧಾರಿಯಾಗಿ, ಪಂಚೇಂದ್ರಿಯಗಳಿಂದ, ಎಲ್ಲ ದ್ವಂದ್ವಗಳನ್ನು ಅನುಭವಿಸಿದರೂ, ಯಾತನೆ, ಸಂಕಟ, ಸುಖ-ದುಃಖಿಗಳಿಗೆ ಅತೀತನಾಗುತ್ತಾನೆ. ಕಾಯಾಭಿಮಾನ, ಅಹಂಕಾರ ಶೂನ್ಯನಾಗಿ ಎಲ್ಲ ಸನ್ನಿವೇಶಗಳಲ್ಲಿಯೂ ಸ್ಥಿತಪ್ರಜ್ಞನಾಗಿ ಸದಾ ಆತ್ಮರತಿಯಲ್ಲಿ ಇರುತ್ತಾನೆ. (ಆತ್ಮನಿಷ್ಠನಾಗಿರುತ್ತಾನೆ) ಕಲ್ಲು ಜಡ, ನಿರ್ಜೀವ ವಸ್ತು ಆದ್ದರಿಂದ ಕಲ್ಲಿಗೆ ಮುಕ್ತಿ ಬೇಕಾಗಿಲ್ಲ. ಜೀವನ್ಮುಕ್ತನು ಆಗಲೆ 'ಬಿಡುಗಡೆ' ಪಡೆದಿದ್ದರಿಂದ, ಅತನಿಗೂ ಮುಕ್ತಿ ಬೇಕಿಲ್ಲ.

ಪ್ರಶ್ನೆ : ನಾನು ಜಡನೂ ಅಲ್ಲ. ಜೀವನ್ಮುಕ್ತನೂ ಅಲ್ಲ. ನಾನು ಸುಖ-ದುಃಖಿಗಳನ್ನು ಅನುಭವಿಸುವ ವ್ಯಕ್ತಿ. ಇದೇ ರೀತಿ ನಾನು ಜೀವನ ನಡೆಸಿದರೆ ತಪ್ಪೇನಿದೆ ?

ಹಂಸ : ಹ್ಞಾಂ ! ನೀನು ಹುಟ್ಟಿರುವುದೇ ಈ ಕಾರಣಕ್ಕಾಗಿ – ಸುಖ-ದುಃಖಿಗಳ ಜೀವನ ನಡೆಸಲು. ನೀನು ಸುಖಿವಾಗಿರಲು ಜನ್ಮ ತಳೆದು ಬಂದೆ. ಆದರೆ ಜೀವನ ಕೇವಲ ಸುಖಿಮಯವಲ್ಲ. ಹಗಲು ಮುಗಿದು ರಾತ್ರಿ ಬರುವಂತೆ, ಬೆಳಕಿನ ನಂತರ ಕತ್ತಲೆ ಬರುವಂತೆ ಸುಖಿದ ಹಿಂದೆಯೇ ದುಃಖಿ ಹಾಗು ಜನನದ ಹಿಂದೆ ಮೃತ್ಯು ಪೊಂಚು ಹಾಕಿ ಕಾಯುತ್ತಿರುತ್ತದೆ. ಈ ದ್ವಂದ್ವಗಳಿಂದ ಬಿಡುಗಡೆಯ ಪ್ರಶ್ನೆಯೇ ಇಲ್ಲ. ಜನನ – ಮರಣ – ಜನನ ಚಕ್ರ ನಿರಂತರವಾಗಿ ನಡೆಯುವಂತಹದ್ದು. ಹುಟ್ಟಿ ಬಂದ ಮೇಲೆ ಸುಖಿದ ಜೊತೆ ದುಃಖಿವನ್ನು ಅನುಭವಿಸಿಯೇ ತೀರಬೇಕು. ಅಲ್ಲವೆ ? ಜೀವನದ ಉದ್ದಕ್ಕೂ ದುಃಖಿಬೇಡವೆಂದು ಎಲ್ಲರೂ ಆಶಿಸುತ್ತಾರೆ. ಆದರೆ ಅದು ಸಾಧ್ಯವೆ? ಬಾಲ್ಯಾವಸ್ಥೆಯಲ್ಲಿ ಸುಖಿಮಯ ಅನುಭವಗಳು ಇದ್ದರೂ – ವಯಸ್ಸು ಕಳೆದಂತೆ – ವೃದ್ಧಾಪ್ಯದತ್ತ ಹೆಜ್ಜೆ ಹಾಕಿದಂತೆ, ದುಃಖಿ, ಸಂಕಟ ಚಿಂತೆಗಳ ಸರಮಾಲೆಯೇ ನಮ್ಮ ಕೊರಳಿಗೆ ಬೀಳುತ್ತದೆ. ಇದರಿಂದ ಬಿಡುಗಡೆ ಎಲ್ಲಿ ?

CC-0. In Public Domain. Digitized by eGangotri

ಈಗ ನಿನಗೆ ಮುಕ್ತಿ ಬೇಕಾದರೆ ಇದಕ್ಕೆಲ್ಲವನ್ನೂ ಎದುರಿಸಬಲ್ಲೆ ಎನ್ನುವ ಛಲವಿದೆ. ಆದರೆ ಅದಾವುದೂ ಶಾಶ್ವತವಲ್ಲ. ಕಾಲ ಯಾರ ಅಧೀನವೂ ಅಲ್ಲ. ಎಲ್ಲವನ್ನೂ ನುಂಗಿ ಹಾಕಿಬಿಡುತ್ತದೆ. ನೀನು ಗಳಿಸಿದ ಐಶ್ವರ್ಯ, ಅಂತಸ್ತು, ಪ್ರತಿಷ್ಠೆ, ಕೀರ್ತಿ, ಗೌರವ, ಸಮಾಜದಲ್ಲಿ ಮನ್ನಣೆ, ಸ್ಥಿರಾಸ್ತಿ, ಭೂಮಿ, ಹಣ ಯಾವುದೂ ಶಾಶ್ವತವಾಗಿ ನಿನ್ನ ಜೊತೆ ಬರುತ್ತವೆಯೇ ? ಈ ಜನನ – ಮರಣ ಚಕ್ರದಿಂದ ಬಿಡುಗಡೆ ಹೊಂದಿ, ಶಾಶ್ವತವಾಗಿ, ಅಮರತ್ವ ಪಡೆಯುವುದೇ ನಿಜವಾದ ಮುಕ್ತಿ.

ಕೊನೆಯ ಹಂತದಲ್ಲಿ ಸಹಿಸಲಸಾಧ್ಯವಾದ ಕಷ್ಟ ಅನುಭವಿಸುವಾಗ, ಜೀವನದಲ್ಲಿ ಜಿಗುಪ್ಸೆ ಹುಟ್ಟಿ, ಎಂದೆಂದಿಗೂ ಈ ಜನ್ಮಬೇಡ ಅನಿಸುತ್ತದೆ. ಅಂದರೆ ಮುಕ್ತಿ ಪಡೆಯಬೇಕೆನಿಸುತ್ತೆ. ಆದರೆ ಆವಾಗ ಅದು ಸಾಧ್ಯವಾಗದು. ಕಳೆದು ಹೋದ ಜೀವನ ವ್ಯರ್ಥಹೋಯಿತು. ಪಾಶ್ಚಾತ್ತಾಪ ಪಟ್ಟು ಪ್ರಯೋಜನವಿಲ್ಲ. ಅದಕ್ಕಾಗಿ ಈವಾಗಿಂದಲೇ ಪ್ರಯತ್ನ ಮಾಡಬೇಕು ಮುಕ್ತಿಗೆ.

* * *

ಡಾ॥ ಅವತಾರ ಮಟ್ಟು (ವಿಜ್ಞಾನಿ – ವಾಷಿಂಗ್ಟನ್ – ಅಮೇರಿಕಾ) :

ಪ್ರಶ್ನೆ : ನಾನು ಒಬ್ಬ ವಿಜ್ಞಾನಿಯೊಡನೆ ಕೆಲಸ ಮಾಡುತ್ತಿದ್ದೆ. ಅವರು ನಿಷ್ಠಾವಂತ, ಶ್ರದ್ಧಾಳು ವಿಜ್ಞಾನಿಯಾಗಿದ್ದರೂ, ಪ್ರತಿ ಶುಕ್ರವಾರ ತಮ್ಮ ಯಹೂದಿ ಮತ ಪೂಜೆಗೆ ವೈಜ್ಞಾನಿಕ ಕಾರ್ಯಗಳನ್ನು ತ್ಯಜಿಸಿ ನಿಯಮ ಬದ್ಧರಾಗಿ ಹೋಗುತ್ತಿದ್ದರು. ನೀವು ಯಾಕೆ ಹೀಗೆ ಮಾಡುತ್ತೀರಿ ಎಂದು ನಾನು ಅವರನ್ನು ಕೇಳಿದಾಗ, ಅವರು "ವಿಜ್ಞಾನ ಮತ್ತು ಧರ್ಮ ಎರಡೂ ಸಮಾನಾಂತರ ಮಾರ್ಗಗಳು. ಒಂದಲ್ಲ ಒಂದು ದಿನ ಅವು ಪರಸ್ಪರ ಕೂಡುವುವು" ಎಂದರು. ನೀವು ಇದನ್ನು ನಂಬುತ್ತೀರಾ ?

ಹಂಸ : ಎರಡು ಸಮಾನಾಂತರ ಮಾರ್ಗಗಳು ಎಂದೂ ಕೂಡುವುದಿಲ್ಲ. ಅವು ಕೂಡಬೇಕಾದರೆ ಒಂದನ್ನಾದರೂ ಬಗ್ಗಿಸಬೇಕು. ಭೌತಿಕ ವಿಜ್ಞಾನ ಮತ್ತು ಆಧ್ಯಾತ್ಮ ವಿಜ್ಞಾನಗಳು ಬೇರೆ ಬೇರೆ ಮಟ್ಟದಲ್ಲಿರುವ ಸಮಾನಾಂತರ ಮಾರ್ಗಗಳು, ವಿರುದ್ಧ ದಿಕ್ಕುಗಳನ್ನರಸಿ ಹೋಗುವಂಥವು. ಭೌತಿಕ ವಿಜ್ಞಾನವು ಶುದ್ಧ ಸ್ಥೂಲ ವಸ್ತು ವಿಜ್ಞಾನ. ಕಣ್ಣಿಗೆ ಕಾಣುವ ಅಥವಾ ಯಂತ್ರೋಪಕರಣಗಳ ಮೂಲಕ ತಿಳಿಯಬಹುದಾದ ಇಂದ್ರಿಯ ಜ್ಞಾನ. ಆ ಜ್ಞಾನವು ಇಂದ್ರಿಯಾತೀತವಾಗಲು ಸಾಧ್ಯವಿಲ್ಲ. ವಿಜ್ಞಾನಿಯು ಸ್ಥೂಲ ದ್ರವ್ಯ ಜ್ಞಾನವನ್ನು ಇಂದ್ರಿಯ, ಮನಸ್ಸು ಮತ್ತು ಬುದ್ಧಿಯ ನೆರವಿನಿಂದ

CC-O. In Public Domain. Digitized by eGangotri

ಪಡೆಯುತ್ತಾನೆ. ಆದರೆ ತನ್ನನ್ನು ತಾನೇ ಅರಿತುಕೊಳ್ಳಲಾರ. ತನ್ನ ಮನಸ್ಸನ್ನು ಅರಿತುಕೊಳ್ಳಲಾರ. ತನ್ನನ್ನೇ ಅರಿಯದವನಿಂದ ಪಡೆದ ಇನ್ನೊಂದು ವಸ್ತುವಿನ ಜ್ಞಾನ ನಿಷ್ಪ್ರಯೋಜಕ. ಉದಾಹರಣೆಗೆ, ಒಂದು ವಸ್ತುವಿನ ಉದ್ದವನ್ನು ಅಳೆಯುವಾಗ, ಅಳತೆ ಇದ್ದ ಕೋಲನ್ನು ಉಪಯೋಗಿಸಿದರೆ, ನಾವು ಮಾಡಿದ ಅಳತೆ ಅರ್ಥವತ್ತಾಗುವುದು. ಅಳತೆ ಇಲ್ಲದ ಕೋಲಿನಿಂದ ಅಳೆದರೆ, ನಮ್ಮ ಅಳತೆ ಪ್ರಯೋಜನವಾಗಲಾರದು. ತನ್ನನ್ನು ತಾನೇ ಅರಿಯದ ವಿಜ್ಞಾನಿಯ ಎಲ್ಲ ಜ್ಞಾನವೂ ವ್ಯರ್ಥ.

ಒಬ್ಬ ಯೋಗಿಯು ಭೌತಿಕ ವಸ್ತುವನ್ನು ತ್ಯಜಿಸಿ ಅಂತರ್ಮುಖಿಯಾಗಿ ತನ್ನನ್ನು ತಾನೇ ಅರಿತುಕೊಳ್ಳುತ್ತಾನೆ. ತನ್ನನ್ನೂ, ಮನಸ್ಸನ್ನೂ ಅರಿತು ಭೌತಿಕ ಪ್ರಪಂಚವನ್ನು ಅರಿಯುವುದರಿಂದ ಅತನ ಜ್ಞಾನ ನಿಜವಾದ ಜ್ಞಾನ. ವಿಜ್ಞಾನಿಯು ಬಹಿರ್ಮುಖಿಯಾಗಿ ಬಾಹ್ಯ ದೃಶ್ಯ ಜಗತ್ತಿನಲ್ಲಿಯೇ ಮುಳುಗಿ ನಾಶವಾಗುತ್ತಾನೆ. ತಾನು ಅತಿಬುದ್ಧಿವಂತನೆಂಬ ಅಹಂಕಾರವೇ ಅದಕ್ಕೆ ಕಾರಣ. ಸಂತನು ತನ್ನ ಅಹಂಕಾರವನ್ನು ನಾಶ ಮಾಡುವುದರಿಂದ ಪರಮಾತ್ಮನನ್ನು ಪಡೆಯುತ್ತಾನೆ. ಆದ್ದರಿಂದ ವಿಜ್ಞಾನಿಯು ತನ್ನ ಬಹಿರ್ಮುಖ ಜ್ಞಾನವು ವ್ಯರ್ಥವೆಂದರಿತು, ತನ್ನ ಅಹಂಕಾರವನ್ನು ಕೊಂದು ಶ್ರದ್ಧೆ ಭಕ್ತಿಗಳಿಂದ ದೇವರನ್ನು ಅರಸಿದರೆ, ಆತನೂ ದೇವರನ್ನು ಕಾಣಬಲ್ಲ.

ಪ್ರಶ್ನೆ : ನಿಮ್ಮ ಪುಸ್ತಕ "ವಿಜ್ಞಾನಿಯ ಸತ್ಯಾನ್ವೇಷಣೆ"ಯಲ್ಲಿ ಸಮರ್ಪಣ ಮತ್ತು ನಿಃಸ್ವಾರ್ಥ ಭಾವನೆಯಿಂದ ಸಂಶೋಧನೆ ಮಾಡುವ ವಿಜ್ಞಾನಿಗಳು ನಿಜವಾದ ಕರ್ಮಯೋಗಿಗಳೆಂದು ಬರೆದಿದ್ದೀರಿ. ಅವರು ದೇವರನ್ನು ಕಾಣಬಲ್ಲರೆ ? ಮೋಕ್ಷ ಪಡೆಯುವರೆ ?

ಹಂಸ : ವಿಖ್ಯಾತ ವಿಜ್ಞಾನಿಗಳು ಲಾಭಾಲಾಭ, ಜಯಾಪಜಯ, ಮಾನಾಪಮಾನ, ಶುಭಾಶುಭಗಳನ್ನು ತ್ಯಜಿಸಿ ನಿಃಸ್ವಾರ್ಥವಾಗಿ ಸಂಶೋಧನೆ ಮಾಡುತ್ತಿದ್ದರೆ, ನಿಜವಾಗಿಯೂ ಕರ್ಮಯೋಗಿಗಳು. ಆದರೆ ಅಷ್ಟರಿಂದಲೇ ಮೋಕ್ಷ ದೊರಕದು. ಅದಕ್ಕೆ ಆತ್ಮಜ್ಞಾನವೂ ಬೇಕು. ಅದಕ್ಕೆ ಶ್ರದ್ಧೆ ಮತ್ತು ಪರಮಾತ್ಮನಲ್ಲಿ ಅನನ್ಯ ಭಕ್ತಿ ಅಥವಾ ಗುರೂಪದೇಶ ಪಡೆಯಬೇಕಾಗುವುದು. ಇದಿಲ್ಲದೇ ಮೋಕ್ಷ ಅಸಾಧ್ಯ.

- (ಸಶೇಷ)

* * *

ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ ।
ಮೃತ್ಯೋರ್ಮಾ ಅಮೃತಂ ಗಮಯ ॥
॥ ಹರಿಃ ಓಂ ತತ್ಸತ್ ॥

CC-O. In Public Domain. Digitized by eGangotri



Sri Vidyabharathi Book Centre, Sringeri

HIS DIVINE GRACE

SWAMI VIDYANAND

CC-O. In Public Domain. Digitized by eGangotri

Sri Vidyabharathi Book Centre, Sringeri